

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

Volume : 07 | Issue : 169 | Tuesday 11-03-2025 | E-mail : maruti.b.hosamani76@gmail.com | Page: 4 | Price : Rs. 1/-


## ಮಲೇರಿಯಾ ತಾಣವಾದ ನೀರಾವರಿ ಇಲಾಖೆ, ಸಾರ್ವಜನಿಕರ ಆರೋಗ್ಯದ ಜೊತೆ ಇಲಾಖೆಯು ಚೆಲ್ಲಾಟ

**ಸಿಹಿ ಕಹಿ ಸುದ್ದಿ**

**ರೋಣ :** ನಗರದ ನೀರಾವರಿ ಇಲಾಖೆಯ ಎಂ.ಆರ್.ಬಿ.ಸಿ ಆವರಣದಲ್ಲಿ ಶ್ರೀನಗರದ ಚರಂಡಿ ನೀರು ಹರಿದು ನೀರಾವರಿ ವಸತಿ ಗೃಹದ ಸುತ್ತಲೂ ಆವರಿಸಿದ್ದು, ಸತತವಾಗಿ ನೀರು ನಿಂತು ಹಳೆಯ ವಸತಿ ಗೃಹಗಳು ಶೀತಲ ಗೊಂಡಿರುತ್ತವೆ. ಅಲ್ಲಿಯ ಕಟ್ಟಡಗಳು ಕುಸಿದು ಬೀಳುವ ಹಂತ ತಲುಪಿವೆ. ಹಾಗೂ ಸಾರ್ವಜನಿಕರಿಗೆ ಅಡ್ಡಾಡಲು ತೊಂದ-ರೆ ಯಾದರು ನೀರಾವರಿ ಇಲಾಖೆಯ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ಹೊರ ಹಾಕಿದ್ದಾರೆ.

ಈ ಕುರಿತು ನೀರಾವರಿ ಇಲಾಖೆಯ ಜಗದೀಶ್ ಅವರಿಗೆ ಕರೆ ಮಾಡಿದರೆ ಕ-ರೆಗೆ ಉತ್ತರ ನೀಡಿರುವುದಿಲ್ಲ. ಹಾಗೂ ಇಲಾಖೆಯ ಕಿರಿಯ ಇಂಜಿನಿಯರ್ ಮುತ್ತಣ್ಣ ಮೆಣಸಿನಕಾಯಿ ಇವರಿಗೆ ಕರೆ ಮಾಡಿ ಪತ್ರಕರ್ತರು ಕೇಳಿದರೆ ನಾನು ಈಗ ಬಿ.ಜಿ ಇದ್ದೀನಿ ಆಮೇಲೆ ಮಾತನಾಡುತ್ತೇನೆ ಎಂದು ಹಾರಿಕೆ ಉತ್ತರ ಕೊಟ್ಟು ಕರೆ ಕಟ್ ಮಾಡುತ್ತಿರುವುದು ದೊಡ್ಡ ದುರಂತವಾಗಿದೆ. ಹಳೆಯ ವಸತಿ ಗೃಹಕ್ಕೆ ನುಗ್ಗುತ್ತಿರುವ ಚರಂಡಿ ನೀರು ತಮ್ಮ ಕಚೇರಿಗೆ ಮುಂದೊಂದು ದಿನ ನುಗ್ಗುವುದು ಎಂದು ಪ್ರಜ್ಞೆ ಇಲ್ಲದೆ ನೀರಾವರಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳು ಸಾರ್ವಜನಿಕರಿಗೆ ಮಲೇರಿಯಾ ಹರಡುವ ಸ್ಥಿತಿಯಲ್ಲಿ ನೀರು ನಿಂತರು ಕಣ್ಣು ಮುಚ್ಚಿ ಕೊಳ್ಳುತ್ತಿರುವುದು ಅಕ್ಷರ ಸಹ ಸತ್ಯ.

ಶ್ರೀ ನಗರದ ಜನರು ಎಂ.ಆರ್.ಬಿ.ಸಿ ಬೈಪಾಸ್ ರಸ್ತೆಯಲ್ಲಿ ದಿನ ನಿತ್ಯ



ಅಡ್ಡಾಡುತ್ತಿದ್ದು ಬೈಕುಗಳಲ್ಲಿ ಹೋಗುವಾಗ ಕೆಸರು ನೀರಿನಲ್ಲಿ ಬಿದ್ದು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ಹಾಗೂ ಸರ್ಕಾರಿ ನೌಕರರು ಶ್ರೀನಗರ ಉತ್ತಮ ಪ್ರದೇಶವಾಗಿದ್ದು ಅಲ್ಲಿ ಎಲ್ಲರೂ ವಾಸವಿರುತ್ತಿದ್ದು. ಚರಂಡಿ ನೀರಿನ ಕೆಸರು ಮುಖಕ್ಕೆ ಸಿಡಿಸಿ ಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ನೀರಾವರಿ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರದೆ ಯಾಕೆ ಮೌನವಾಗಿದ್ದಾರೆ ಎಂದು ಸಾರ್ವಜನಿಕರಿಗೆ ಪ್ರಶ್ನೆಯಾಗಿ ಕಾಡುತ್ತಿದೆ?

ಪುರಸಭೆ ವ್ಯಾಪ್ತಿಯಲ್ಲಿ ಬರುವ ಈ ಚರಂಡಿ ನೀರು ಅವರಾದರೂ ಇತ್ತ ಕಡೆ ಗಮನ ಹರಿಸಿ ಜನರಿಗೆ ಮಲೇರಿಯಾ ಹರಡುವ ಸ್ಥಿತಿಯನ್ನು ತಪ್ಪಿಸ ಬೇಕೆಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್. ವಿ ಸಂಕನಗೌಡ್ರ.ರೋಣ. ಗದಗ**

## ನ್ಯೂ ಮಾ ಶಾರದಾ ಶಾಲೆಯಲ್ಲಿ 2025ರ ಅತೀ ದೊಡ್ಡ – ಎಜುಕೇಶನ್ ಎಕ್ಸ್ಪೋ (EDUCATION EXPO).

**ಸಿಹಿ ಕಹಿ ಸುದ್ದಿ ಸಿಂಧನೂರು :** ತಾಲೂಕಿನ ಆರ್.ಎಚ್ ಕಾಲೋನಿ 4 ರ ನ್ಯೂ ಮಾ ಶಾರದಾ ಶಾಲೆಯಲ್ಲಿ ಗ್ರ್ಯಾಂಡ್ ಓಪನ್ ಹೌಸ್ ಪ್ರದರ್ಶನ ದೊಂದಿಗೆ 16. ವರ್ಷಗಳ ಶೈಕ್ಷಣಿಕ ಶ್ರೇಷ್ಠತೆ ಯೊಂದಿಗೆ 2025 ರ ಅತೀ ದೊಡ್ಡ ಎಜುಕೇಶನ್ ಎಕ್ಸ್ಪೋ (EDUCATION EXPO) ಕಾರ್ಯಕ್ರಮ ಅದ್ದೂ-ರಿಯಾಗಿ ನೆರವೇರಿತು.

ಇದೇ ಸಂಧರ್ಭದಲ್ಲಿ ಮಾತನಾಡಿದ ನ್ಯೂ ಮಾ ಶಾರದಾ ಶಾಲೆಯ ಸಂಸ್ಥಾಪಕ ಶ್ರೀ ನೀಲಕಮಲ್ ಸ್ವರ್ಣಕರ್ ಅವರು ಶಾಲೆಯ 16 ವರ್ಷಗಳ ಪ್ರಯಾಣದ ಬಗ್ಗೆ ಪ್ರತಿಬಿಂಬಿಸುತ್ತದೆ. "ಜ್ಞಾನ, ಸೃಜನ ಶೀಲತೆ ಮತ್ತು ಮೌಲ್ಯಗಳನ್ನು ಸಂಯೋಜಿಸುವ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ನಮ್ಮ ದೃಷ್ಟಿಕೋನವಾಗಿದೆ. ಇಂದು ನಮ್ಮ ವಿದ್ಯಾರ್ಥಿಗಳು ಆತ್ಮವಿಶ್ವಾಸ ದಿಂದ ತಮ್ಮ ಆಲೋಚನೆ ಗಳನ್ನು ಪ್ರಸ್ತುತ ಪಡಿಸುವುದನ್ನು ನೋಡುವುದು ನಿಜಕ್ಕೂ ಹೃದಯ ಸ್ಪರ್ಶಿಯಾಗಿದೆ. ಈ ಪ್ರದರ್ಶನವು ಅವರ ಕಠಿಣ ಪರಿಶ್ರಮ ಮತ್ತು ಸಮರ್ಪಣೆಗೆ ಸಾಕ್ಷಿಯಾಗಿದೆ. "ಎಂದರು.

ಎಕ್ಸ್ಪೋ ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ಕೃಷ್ಣದೇವರಾಯ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯರಾದ ಶ್ರೀಮತಿ ಚಂದ್ರಕಲಾ ಪ್ರಕಾಶ್ ಅವರು ವಿದ್ಯಾರ್ಥಿಗಳ ಸೃಜನ ಶೀಲತೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. "ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಮಾಡಿದ ಪ್ರಯತ್ನಗಳು ಶ್ಲಾಘನೀಯ. ಇಂತಹ ಕಾರ್ಯಕ್ರಮಗಳು ಯುವ ಮನಸ್ಸುಗಳನ್ನು ಪಠ್ಯ ಪುಸ್ತಕಗಳನ್ನು ಮೀರಿ ಯೋಚಿಸಲು ಮತ್ತು ನೈಜ ಜಗತ್ತಿನ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಲು ಪ್ರೋತ್ಸಾಹಿಸುತ್ತವೆ" ಎಂದು ತಿಳಿಸಿದರು.



ಮುಖ್ಯ ಅತಿಥಿಯಾಗಿ ಆಗಮಿಸಿದ ಪರಿಸರ ರಾಜ್ಯ ಪ್ರಶಸ್ತಿ ಪ್ರಸ್ತುತರು ಪುರಸ್ಕೃತರು ವನಸಿರಿ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಅಮರೇಗೌಡ ಮಲ್ಲಾಪುರ ಅವರು ಸಮಗ್ರ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು. "ಶಿಕ್ಷಣವು ಕೇವಲ ಶ್ರೇಣಿಗಳ ಬಗ್ಗೆ ಅಲ್ಲ, ಕುತೂಹಲ, ನಾವೀನ್ಯತೆ ಮತ್ತು ಆತ್ಮ ವಿಶ್ವಾಸವನ್ನು ಬೆಳೆಸುವ ಬಗ್ಗೆ. ನ್ಯೂ ಮಾ ಶಾರದಾ ಶಾಲೆಯು ಭವಿಷ್ಯದ ನಾಯಕರನ್ನು ರೂಪಿಸುವಲ್ಲಿ ಅದ್ಭುತ ಕೆಲಸ ಮಾಡುತ್ತಿದೆ" ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಈ ಸಂಧರ್ಭದಲ್ಲಿ ನಾವೀನ್ಯತೆ ಮತ್ತು ಸೃಜನ ಶೀಲತೆಗೆ ವೇದಿಕೆ ಪ್ರದರ್ಶನವು ಒಳಗೊಂಡಿತ್ತು:–1)ಶೈಕ್ಷಣಿಕ ಶ್ರೇಷ್ಠತೆ ವಿದ್ಯಾರ್ಥಿಗಳು ವಿಜ್ಞಾನ,ಗಣಿತ,ಸಮಾಜ ಅಧ್ಯಯನ, ಕಂಪ್ಯೂಟರ್ ಮತ್ತು ಭಾಷೆಗಳಲ್ಲಿ ನವೀನ ಯೋಜನೆಗಳನ್ನು ಪ್ರದರ್ಶಿಸಿದರು.2)ಕಲೆ ಮತ್ತು ಕರಕುಶಲ ವಸ್ತುಗಳು – ವರ್ಣಚಿತ್ರಗಳು,ಪರಿಸರ ಸ್ನೇಹಿ ಕರಕುಶಲ ವಸ್ತುಗಳು ಮತ್ತು ಸೃಜನಶೀಲ ಮಾದರಿಗಳ ಮೋಡಿಮಾಡುವ ಪ್ರದರ್ಶನ.3) ಸಂವಾದಾತ್ಮಕ ಕಲಿಕೆಯ ಮೂಲೆಗಳು – ಸಂದರ್ಶಕರಿಗೆ ತೊಡಗಿಸಿಕೊಳ್ಳುವ ಪ್ರಯೋಗಗಳು ಮತ್ತು ಪ್ರಾಯೋಗಿಕ ಚಟುವಟಿಕೆಗಳು ನಡೆದವು.

ಇದೇ ಸಂಧರ್ಭದಲ್ಲಿ ವನಸಿರಿ ಅಮರೇಗೌಡ ಮಲ್ಲಾಪುರ ಅವರಿಗೆ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂಧರ್ಭದಲ್ಲಿ ರತನ್ ಬಿಸ್ವಾಸ್ ಖಆಒಅ ಅಧ್ಯಕ್ಷರು, ನ್ಯೂ ಮಾ ಶಾರದ ಶಾಲೆ, ಶ್ರೀಮತಿ ಇಂದಿರಾ ಆಡಳಿತಾ ಅಧಿಕಾರಿ, ವನಸಿರಿ ಸದಸ್ಯರಾದ ರಾಜು ಪತ್ತಾರ, ವೆಂಕಟರೆಡ್ಡಿ ಹೆಡಗಿನಾಳ, ನಾಗರಾಜ ರೈತ ನಗರ ಕ್ಯಾಂಪ್, ನ್ಯೂ ಮಾ ಶಾರದಾ ಶಾಲೆ ವಿದ್ಯಾರ್ಥಿಗಳು, ಪೋಷಕರು ಮತ್ತು ಸ್ಥಳೀಯ ಸಮುದಾಯ ದಿಂದ ಉತ್ಸಾಹ ಭರಿತ ಜನಸ್ತೋಮ ಸೇರಿತ್ತು ಎಂದು ವರದಿಯಾಗಿದೆ.

## ಕಲ್ಪತರು ಕಿರಿಯ ಪ್ರಾಥಮಿಕ ಶಾಲೆಯಲ್ಲಿ 7ನೇ. ವಾರ್ಷಿಕೋತ್ಸವ–ಸಮಾರಂಭ ಜರುಗಿತು

**ಸಿಹಿ ಕಹಿ ಸುದ್ದಿ**

**ಡಂಬಳ :** ಸಿಂದಗಿ ತಾಲ್ಲೂಕಿನ ಗೋಲಗೇರಿ ಗ್ರಾಮದ ಹತ್ತಿರ ಇರುವ ಡಂಬಳದಲ್ಲಿ ಕರ್ನಾಟಕ ಅಲೆಮಾರಿ ಜನಾಂಗ ಶಿಕ್ಷಣ ಹಾಗೂ ವಿವಿದೋದ್ದೇಶಗಳ ಸೇವಾ ಸಂಸ್ಥೆ ಗೋಲಗೇರಿ ಅಡಿಯಲ್ಲಿ ಕಲ್ಪತರು ಕಿರಿಯ ಪ್ರಾಥಮಿಕ ಶಾಲೆ ಡಂಬಳದಲ್ಲಿ ಶಾಲಾ 7 ನೇ ವಾರ್ಷಿಕೋತ್ಸವ ನಡೆಯಿತು.

ಯಂಕಂಚಿಯ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು ಹಾಗೂ ಗೋಲಗೇರಿಯ ಶ್ರೀ ವೇ.ಮೂ ಪ್ರಶಾಂತ ಮಹಾಸ್ವಾಮಿಗಳು ದಿವ್ಯ ಸಾನಿದ್ಯ ವಹಿಸಿದ್ದರು.

ಯಂಕಂಚಿಯ ಶ್ರೀ ಗಳು ಮಾತನಾಡಿ ಬದುಕನ್ನುಕಟ್ಟಿಕೊಳ್ಳಲು ದುಡ್ಡು ಮುಖ್ಯವಲ್ಲ ಶಿಕ್ಷಣ ಜ್ಞಾನ ಮುಖ್ಯ

ಜ್ಞಾನದ ದೇಗುಲಗಳೆಂದರೆ ಶಾಲೆಗಳು ಎಂದು ಹೇಳಿದರು ನಂತರ ಗೋಲಗೇರಿಯ ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಶರಣು ಚಟ್ಟಿ ಅವರು ಮಾತನಾಡಿ, ಮಕ್ಕಳ ಶೈಕ್ಷಣಿಕ ಬಲವರ್ಧನೆಗೆ ಉತ್ತಮ ಪರಿಸರ ದೊಂದಿಗೆ ನೈತಿಕ ಸಂಸ್ಕಾರ ಅಗತ್ಯ. ಶಿಕ್ಷಕ ರೊಂದಿಗೆ ಪಾಲಕರು ಮಕ್ಕಳ ಕಲಿಕೆಯ ಕಡೆ ಗಮನ ಹರಿಸಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸಹಕರಿಸ ಬೇಕು ಎಂದು ತಿಳಿಸಿದರು.

ಮಹಿಳೆಯರ ದಿನಾಚರಣೆ ಪ್ರಯುಕ್ತ



ಶಾರದಾಂಬೆ ಭಾವ ಚಿತ್ರಕ್ಕೆ ಶ್ರೀ ಮತಿ ನಿರ್ಮಲಾ ಮಾರಲಭಾವಿ ಅವರು ಪೂಜೆ ನೆರವೇರಿಸಿದರು. ಸಿದ್ದು ರಾಜಾರಾಮ ಗೊಂಧಳಿ ಅಧ್ಯಕ್ಷತೆ ವಹಿಸಿದ್ದರು. ವಿಜುಗೌಡ ನಿಂ ಬಿರಾದಾರ ಉದ್ಘಾಟಿಸಿದರು,

ಬಿ.ಸಿ ಪಾಟೀಲ ವಕೀಲರು ಹಾಗೂ ಭೀಮಾಶಂಕರ ಅಲ್ಲಾಪೂರ. ಜ್ಯೋತಿ ಬೆಳೆಗಿಸಿದರು. ಭೀಮಾಜಿ ಕುಲಕರ್ಣಿ, ಅಪ್ಪಾಜಿ ಸುಣಗಾರ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಬಸವರಾಜ ರಾ ಕಾಂಬಳೆ, ಗ್ರಾ.ಪಂ ಅಧ್ಯಕ್ಷರಾದ ಅಮೋಗಿ ಜೈನಾಪೂರ,ಗೊಲ್ಲಾಳಪ್ಪಗೌಡ ಪಾಟೀಲ, ಗೌಡಣ್ಣ ಆಲಮೇಲ, ಎಸ್. ಎಸ್ ಜೋಶಿ ಸರ್, ಬಸವರಾಜ.ಬಿರಾದಾರ ಮಾಗಣಗೇರಿ.

ಎಂ.ಪಿ ರಾಠೋಡ,ರಾಮಚಂದ್ರ ರಾಠೋಡ ಎ.ಡಿಕೋರವಾರ,ಸಿದ್ದುತಡಲಗಿ,ಶಿಕ್ಷಕರಾದ ಪಿ.ಎಂ ಶೇಖ, ಗೊಲ್ಲಾಳಪ್ಪ ಪೂಜಾರಿ, ಆನಂದ ಪ್ರ ಪಾಟೀಲ ಚಂದ್ರು.ಕೆಂಭಾವಿ ಪತ್ರಕರ್ತರಾದ ದಾವಲಸಾಬ.ಬನ್ನೆಟ್ಟಿ ಸೇರಿದಂತೆ ಪಾಲಕರು ಭಾಗವಹಿಸಿದ್ದರು.

ಪ್ರಕಾಶ ಗೊಂಧಳಿ ನಿರೂಪಿಸಿದರು, ಮಹಾಂತೇಶ.ಗೊಂದಳಿ ಸ್ವಾಗತಿಸಿ ವಂದಿಸಿದರು. ಸುಮಾರು 2 ಗಂಟೆ ಕಾಲ ಮುದ್ದು ಮಕ್ಕಳು ನೃತ್ಯ ಮತ್ತು ಮನರಂಜನೆ ಕಾರ್ಯಕ್ರಮ ನಡೆಯಿತು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ. ಮನಗೂಳಿ.ತಾಳಿಕೋಟೆ**

## ಉಪನ್ಯಾಸಕರು ನಿರಂತರ ಅಧ್ಯಯನಶೀಲರಾಗಬೇಕು




**ಬನಹಟ್ಟಿ :** ಉಪನ್ಯಾಸಕರು ನಿರಂತರ ಅಧ್ಯಯನ ಶೀಲರಾಗಿರುವುದರ ಜೊತೆಗೆ ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವುದರಿಂದ ಅವರ ವ್ಯಕ್ತಿತ್ವ ಹೆಚ್ಚುತ್ತದೆ. ಉಪನ್ಯಾಸಕರಿಗೆ ಎಲ್ಲ ರೀತಿಯ ಅನುಕೂಲ ಮಾಡಿಕೊಡುವ ದಿಶೆಯಲ್ಲಿ ಸಂಘವು ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ ಎಂದು ಜನತಾ ಶಿಕ್ಷಣ ಸಂಘದ ಕಾರ್ಯಾಧ್ಯಕ್ಷ ಬಸವಂತ ಜಾಡಗೌಡ ತಿಳಿಸಿದರು.

ಅವರು ಇತ್ತೀಚೆಗೆ ಮಲೇಶಿಯಾದ ಐ. ಎನ್. ಟಿ. ಐ. ಅಂತರರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡ ಅಂತರರಾಷ್ಟ್ರೀಯ ಮಟ್ಟದ ಬಹುಶಾಸ್ತ್ರೀಯ ಸಂಶೋಧನಾ ಹಾಗೂ ಅವಿಷ್ಕಾರ ವಿಚಾರಸಂಕಿರಣದಲ್ಲಿಪ್ರಬಂಧವನ್ನುಮಂಡಿಸಿದ್ದಕ್ಕಾಗಿ ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಭಾರ ಪ್ರಾಚಾರ್ಯ ಡಾ. ಮಂಜುನಾಥ ಬೆನ್ನೂರ ಮಾತನಾಡಿ, ಉಪನ್ಯಾಸಕರು ಅಧ್ಯಯನಶೀಲರಾದಷ್ಟು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಅಂತರರಾಷ್ಟ್ರೀಯ ವಿಚಾರ ಸಂಕಿರಣದ ಜೊತೆಗೆ ಭಾಗವಹಿಸುವುದರ ಜೊತೆಗೆ ಅಲ್ಲಿಯ ವಿಶ್ವ ವಿದ್ಯಾಲಯದ ಮತ್ತು ತಮ್ಮಣ್ಣಪ್ಪ ಚಿಕ್ಕೊಡಿ ಕಾಲೇಜಿನ ಮಧ್ಯದಲ್ಲಿ ಮೆಮೊರಂಡಮ್ ಆಫ್ ಅಂಡರಸ್ಟ್ಯಾಂಡಿಗನ್ನು ಕೂಡಾ ನೆರವೇರಿಸಿದ್ದು ಹೆಮ್ಮೆಯ ಸಂಗತಿಯಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚೆಚ್ಚು ಉಪನ್ಯಾಸಕರು ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಬೇಕು ಎಂದರು.

ಡಾ. ಮನೋಹರ ಶಿರಹಟ್ಟಿ, ಜಿ. ಎಸ್. ಪಾಟೀಲ, ಗೀತಾ ಸಜ್ಜನ, ವಿಶ್ವಜ ಕಾಡದೇವರ, ಶ್ವೇತಾ ಮಠದ, ಬಸವರಾಜ ತಳವಾರ, ರವಿ ಕುಳ್ಳಿ, ರಮೇಶ ಹೂಗಾರ, ಅಕ್ಷಯ ಬಸಪ್ಪಗೋಳ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

## ಜಾನಪದ ಸಂಸ್ಕೃತಿ ಉಳಿಸಿರಿ: ರಾಮಾನಂದ ಮಹಾಸ್ವಾಮಿಜಿ

**ಬೀಳಗಿ :** ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿರುವ,ಹಿರಿಯರಿಂದ ಬಳುವಳಿಯಾಗಿ ಬಂದಿರುವ ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ತುಳಸಿಗೇರಿಯ ರಾಮಾನಂದ ಮಹಾಸ್ವಾಮಿಗಳು ಹೇಳಿದರು.



ತಾಲೂಕಿನ ಅರಕೇರಿ ಗ್ರಾಮದಲ್ಲಿ ಕನ್ನಡಜಾನಪದಪರಿಷತ್ ತಾಲೂಕು ಘಟಕ ಬೀಳಗಿ, ವಲಯ ಘಟಕ ಕುಂದರಗಿ ಇವರ ಆಶ್ರಯದಲ್ಲಿ ಜರುಗಿದ ಬೊಮ್ಮಲಿಂಗೇಶ್ವರ ದ್ವಿತೀಯ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಶಿವರಾತ್ರಿ ಜಾನಪದ ವೈಭವ ಕಾರ್ಯಕ್ರಮವನ್ನು ಹಾರ್ಮೋನಿಯಂ ನುಡಿಸಿ, ಶಿವಭಜನೆ ಹಾಡುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಐದಾರು ದಶಕಗಳ ಹಿಂದೆ ತಾಯಂದಿರು ಧಾನ್ಯಬೀಸುವಾಗ,ಕುಟ್ಟುವಾಗ,ರೈತರುಕೃಷಿ ಚಟುವಟಿಕೆಗಳ ಕೆಲಸದ ಸಂದರ್ಭದಲ್ಲಿ ಹಾಡುತ್ತಿದ್ದಹಾಡುಗಳುಇಂದಿನಯಾಂತ್ರಿಕೃತ ಬದುಕಿನಲ್ಲಿ ಕಣ್ಮರೆಯಾಗುತ್ತಿವೆ. ಜಾನಪದ ಕಲೆಗಳು ತನ್ನದೇಯಾದ ವೈಶಿಷ್ಟ್ಯವನ್ನು ಹೊಂದಿವೆ. ಮೂಲ ಜಾನಪದ ಕಲೆಗಳನ್ನು ಯುವ ಪೀಳಿಗೆಗೆ ಪರಿಚಯಿಸುವ ಕೆಲಸವಾಗಬೇಕೆಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ.ಸಾವಕಾರಅಧ್ಯಕ್ಷತೆವಹಿಸಿಮಾತನಾಡಿ, ಯುವ ಜನಾಂಗಕ್ಕೆ ಜಾನಪದ ಸಾಹಿತ್ಯ ಮತ್ತು ಕಲೆ ಬಗ್ಗೆ ಅರಿವು ಮೂಡಿಸಬೇಕಾದ ಅಗತ್ಯವಿದೆ. ಜನಪದದಲ್ಲಿ ಗ್ರಾಮೀಣ ಸಂಸ್ಕೃತಿಯ ಸೊಗಡು ಇದೆ. ಜನಪದ ಸಾಹಿತ್ಯದಲ್ಲಿ ಬರುವ ಮಾನವೀಯ ಮೌಲ್ಯಗಳನ್ನು ತಿಳಿದುಕೊಳ್ಳಬೇಕು. ಕಣ್ಮರೆಯಾಗುತ್ತಿರುವ ಜಾನಪದ ಕಲೆಗಳನ್ನು ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ಕೊಡುಗೆ ನೀಡಬೇಕೆನ್ನುವ ಉದ್ದೇಶದಿಂದ ಕನ್ನಡ ಜಾನಪದ ಪರಿಷತ್ ಶ್ರಮಿಸುತ್ತಿದೆ ಎಂದು ಹೇಳಿದರು.

ಹಿಂದೆ ಬೀಸುವಾಗ,ಕುಟ್ಟುವಾಗ ಹಾಡುತ್ತಿದ್ದ ಹಾಡುಗಳು ಗಿರಣಿ, ಮಿಕ್ಸರ್, ಗ್ರೈಂಡರ ಬಂದಿದ್ದರಿಂದ ಮಾಯವಾಗಿದ್ದರೆ, ರಾಶಿ ಮಶಿನ್ ಪ್ರಭಾವದಿಂದ ಕಣ, ಹಂತಿ ಪದಗಳು, ರಾಶಿ ತರುವಾಗಿನ, ತೆನೆ ಮುರಿಯುವಾಗಿನ, ಕನಕಿ ತರುವಾಗಿನ ಪದಗಳು ಮಾಯವಾಗಿವೆ. ಇವುಗಳನ್ನು ಮುಂದಿನ ಜನಾಂಗಕ್ಕೆ ಕೊಂಡೊಯ್ಯುವ ಕೆಲಸವನ್ನು ಕಲಾವಿದರು ಮಾಡಬೇಕಾಗಿದೆ ಎಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ಬಸವರಾಜ ದಾವಣಗೆರೆ ಪ್ರಾಸ್ತಾವಿಕವಾಗಿ ಮಾತನಾಡಿ, ಜನಪದ ಉಳಿದರೆ ಮಾತ್ರದೇಶದ ಸಂಸ್ಕೃತಿ ಉಳಿಯಲು ಸಾಧ್ಯ. ಜಾನಪದ ಅಳಿದರೆ, ಮಾನವ ಕುಲ ಮುಕ್ಕಾದಂತೆ ಎಂದು ಹೇಳಿದರು.

ವಿವಿಧ ಕಲಾ ಪ್ರದರ್ಶನ ಮಾಡಿದ ಕಲಾವಿದರು, ಕಲಾ ತಂಡಗಳಿಗೆ ಪ್ರಮಾಣ ಪತ್ರ ನೀಡಲಾಯಿತು.

ಬೊಮ್ಮಲಿಂಗೇಶ್ವರ ಆಶ್ರಮದ ಬ್ರಹ್ಮಲಿಂಗ ಸ್ವಾಮಿಗಳು, ಬುದ್ನಿಯ ಸಿದ್ಧಾನಂದ ಸ್ವಾಮಿಗಳು, ಕನ್ನಡ ಜಾನಪದ ಪರಿಷತ್ ಜಿಲ್ಲಾ ಕಾರ್ಯದರ್ಶಿ ಆರ್. ಬಿ. ನಬಿವಾಲೆ, ಕಜಾಪ ಕುಂದರಗಿವಲಯಘಟಕದಅಧ್ಯಕ್ಷಪಾಂಡು ಕನಸಗೇರಿ, ಮುಖಂಡರಾದ ಆರ್. ವಿ. ಪಾಟೀಲ, ಸಾಹಿತಿ ಸದಾನಂದ ಏಳಗಂಟಿ, ಬಾಳಪ್ಪ ಗುರಣ್ಣವರ, ಪಿಕೆಪಿಎಸ್ ಅಧ್ಯಕ್ಷ ಬಶೆಟ್ಟೆಪ್ಪ ಅಂಟೀನ, ಮೌನೇಶ ಕಂಬಾರ, ರಾಮಣ್ಣ ಸಾವಕಾರ, ಗಿರೀಶ ಶಿರಬೂರ, ಜಿ. ಸಿ. ಅಂಗಡಿ, ಸದಾಶಿವ ಆಗೋಜಿ, ದ್ಯಾಮಣ್ಣ ಬಡಿಗೇರ, ವೆಂಕಟೇಶ ಪೂಜಾರಿ, ಸಂತೋಷ ಕಿವುಡಜಾಡರ, ಚಂದಪ್ಪ ಬೋಕಿ, ಯಂಕಪ್ಪ ಹಲಗತ್ತಿ, ಚಂದ್ರು ವೈ. ಎ. ಮತ್ತಿತರರು ಉಪಸ್ಥಿತರಿದ್ದರು.

## ರೈತ ಕಲ್ಯಾಣ ನಿಧಿಯಡಿ ರೈತರ ಮಕ್ಕಳಿಗೆ ಪ್ರೋತ್ಸಾಹ ಧನ ವಿತರಣೆ



**ತೇರದಾಳ:** ಅವಳಿ ಜಿಲ್ಲಾ ಹಾಲು ಉತ್ಪಾದಕರ ಸಹಕಾರಿ ಸಂಘದ ರೈತ ಕಲ್ಯಾಣ ನಿಧಿಯಡಿ ಪದವಿ ಶಿಕ್ಷಣ ಕಲಿಯುತ್ತಿರುವ ಹಾಲು ಉತ್ಪಾದಕ ರೈತರ ಮಕ್ಕಳಿಗೆ ತಲಾ 15 ಸಾವಿರ ರೂ. ಪ್ರೋತ್ಸಾಹ ಧನ ಚೆಕ್ಗಳನ್ನು ಅವಳಿ ಜಿಲ್ಲಾ ಕೆಎಂಎಫ್ ನಿರ್ದೇಶಕ ಲಕ್ಕಪ್ಪ ಪಾಟೀಲ ಗೋಲಭಾವಿ ಹಾಗೂ ಕಾಲತಿಪ್ಪಿ ಗ್ರಾಮದ ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ ವಿತರಿಸಿದರು.

ಈ ಸಂದರ್ಭದಲ್ಲಿ ಮತನಾಡಿದ ಲಕ್ಕಪ್ಪ ಪಾಟೀಲ, ಶಿಕ್ಷಣ ಬದುಕಿನ ಅಸ್ತ್ರವಾಗಿದೆ.

ದಿನೇ ದಿನೇ ಸಾಕಷ್ಟು ಪ್ರಾಮುಖ್ಯತೆ ಪಡೆಯುತ್ತಿದೆ. ಆದ್ದರಿಂದ ರೈತರ ಮಕ್ಕಳು ಕೂಡ ಉನ್ನತ ಶಿಕ್ಷಣ ಪಡೆಯುವಂತಾಗಬೇಕೆಂಬ ಉದ್ದೇಶದಿಂದ ರೈತ ಕಲ್ಯಾಣ ನಿಧಿಯಡಿ ರೈತರ ಮಕ್ಕಳಿಗೆ ಶಿಕ್ಷಣಕ್ಕಾಗಿ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ತೇರದಾಳ ಮತಕ್ಷೇತ್ರದಲ್ಲಿ 45 ಫಲಾನುಭವಿಗಳಿಗೆ ಚೆಕ್ ಬಂದಿದ್ದು, ಆಯಾ ಹಾಲು ಉತ್ಪಾದಕರ ಸಂಘಗಳಿಗೆ ನೀಡಿ ಫಲಾನುಭವಿಗಳಿಗೆ ವಿತರಿಸುವ ಕ್ರಮ ಕೈಗೊಳ್ಳಲಾಗಿದೆ. ರೈತರ ಪರವಾಗಿ ಯಾವುದೇ ಯೋಜನೆಗಳಿದ್ದರೂ ಪ್ರಾಮಾಣಿಕವಾಗಿ ಅವುಗಳನ್ನು ತಲುಪಿಸುವುದಾಗಿ ಭರವಸೆ ನೀಡಿದರು.ಈ ಸಂದರ್ಭದಲ್ಲಿ ರಾಮಪ್ಪ ಪಾಟೀಲ, ಆನಂದ ಜಮಖಂಡಿ, ಚನ್ನಪ್ಪ ಲಟ್ಟಿ, ರೇಳೇಕರ, ಬಸವರಾಜ ವಡರಟ್ಟಿ, ಶಿವಾನಂದ ಸನದಿ, ಶ್ರೀಶೈಲ ರೆಡ್ಡಿ, ರಾಮಪ್ಪ ಕರಿಗಾರ, ವಿಠ್ಠಲ ಸನದಿ ಇನ್ನಿತರರು ಉಪಸ್ಥಿತರಿದ್ದರು.

# ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಭವಿಷ್ಯದ ಪೀಳಿಗೆಗೆ ಸ್ಪೂರ್ತಿ: ಎಸ್.ವಿ. ಬುರ್ಲಿ




**ವಿಜಯಪುರ :** ನಿತ್ಯಜೀವನದಲ್ಲಿ ತಿಳಿದೋ, ತಿಳಿಯದೆಯೋ ವಿಜ್ಞಾನದ ಹಲವಾರು ತತ್ವಗಳನ್ನು ನಾವು ಬಳಸುವುದುಂಟು. ಅವುಗಳನ್ನು ಅರಿಯುವುದು ನಮ್ಮೆಲ್ಲರ ಆದ?ಯ ಕರ್ತವ್ಯವಾಗಿದೆ. ಕೇವಲ ವಿಜ್ಞಾನ ದಿನಾಚರಣೆಯ ದಿನ ವಿಜ್ಞಾನಿಗಳನ್ನು ನೆನೆದರೆ ಸಾಲದು. ಅವರು ನೀಡಿದ ಕೊಡುಗೆಗಳು ನಮ್ಮ ಮನದಲ್ಲಿ ಸದಾ ಇರಬೇಕೆಂದು ರಾಜ್ಯ ಪ್ರಶಸ್ತಿ ಪುರಸ್ಕೃತ, ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷರೂ ಆದ ಎಸ್.ವಿ. ಬುರ್ಲಿ ಅವರು ತಿಳಿಸಿದರು.

ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ವಿಜಯಪುರ ಹಾಗೂ ಶ್ರೀ ಎಲ್. ಇ. ಎಸ್. ಆಂಗ್ಲ ಮಾಧ್ಯಮಪ್ರಾಥಮಿಕಮತ್ತುಪ್ರೌಢಶಾಲೆಗಳಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ "ರಾಷ್ಟ್ರೀಯ ವಿಜ್ಞಾನ ದಿನಾಚರಣೆ" ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಎಸ್. ವಿ. ಬುರ್ಲಿ ಅವರು ಟೆಂಗಿನಕಾಯಿ ಮೇಲೆ ನೀರನ್ನು ಹಾಕಿ ಬೆಂಕಿ ಜ್ವಾಲೆ ಉಂಟು ಮಾಡುವ ಮೂಲಕ ಕಾರ್ಯಕ್ರಮವನ್ನು ವೈಜ್ಞಾನಿಕವಾಗಿ ಉದ್ಘಾಟಿಸಿ ಮಾತನಾಡಿದರು.

ಇದು ಪವಾಡ ಅಲ್ಲ. ಇದರ ಹಿಂದೆ ಇರುವ ವೈಜ್ಞಾನಿಕ ಕಾರಣ ತಿಳಿಸಿದರು.ವಾತಾವರಣದ ಒತ್ತಡ ಅರಿಯಲು ಹಲವಾರು ಪ್ರಯೋಗಗಳನ್ನು ಮಾಡಿ ಬರ್ನೋಲಿ ತತ್ವವನ್ನು ವಿವರಿಸಿ ನಿತ್ಯ ಜೀವನದಲ್ಲಿ ಅದರ ಜ್ಞಾನದ ಅವಶ್ಯಕತೆ ಕುರಿತು ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ತಿಳಿಸಿಕೊಟ್ಟರು. ನಮ್ಮ ಸುತ್ತಮುತ್ತಲಿನ ಹಾಗೂ ಸರಳವಾಗಿ ಕೈಗೆ ಸಿಗುವ ವಸ್ತುಗಳಾದ ಪೇಪರ, ರಟ್ಟು, ಪ್ಲಾಸಿಕ್ ಚಂಡುಗಳು,
ಚಿಕ್ಕಕೊಳವೆ, ನೀರು, ಲಾಳಿಕೆಗಳನ್ನು ಉಪಯೋಗಿಸಿ ಅದ್ಭುತವಾದ ಪ್ರಯೋಗಳನ್ನು ಮಾಡಿತೋರಿಸಿದರಲ್ಲದೇ ಸರ್ ಸಿ.ವಿ.ರಾಮನ್ ಅವರ ಜೀವನ, ವೈಜ್ಞಾನಿಕ ಲೋಕಕ್ಕೆ ಅವರು ನೀಡಿದ ಕೊಡುಗೆ ಮತ್ತು ಅವರ ಅವಿಷ್ಕಾರಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ವಿಜಯಪುರ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಮಿಸಾಳೆ ಅವರು, ಬೆಳಕಿನ ಅಸ್ತಿತ್ವ, ಅದರ ಉಪಯೋಗಗಳು, ಬೆಳಕಿನ ಚದುರುವಿಕೆ. ಸೂರ್ಯೋದಯ, ಸೂರ್ಯಾಸ್ತ ಹಾಗೂ ಮಧ್ಯಾಹ್ನ ಸೂರ್ಯ ಬೇರೆ ಬೇರೆ ಕಾಣಲು ಕಾರಣವನ್ನು ಪ್ರಾಯೋಗಿಕವಾಗಿ ತಿಳಿಸಿದರು.

ಟಿಂಡಾಲ್ ಪರಿಣಾಮ ಕುರಿತು ಪ್ರಯೋಗ ಪ್ರಾತ್ಯಕ್ಷಿಕೆ ಮಾಡಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಮಹತ್ವವನ್ನು ತಿಳಿಸಿದರು ಹಾಗೂ ಸರ್ಸಿ.ವಿ.ರಾಮನ್‌ರ ಬೆಳಕಿನ ಚದುರುವಿಕೆ ಕುರಿತು ವಿವರಿಸಿ ಅವರ ಸಾಧನೆ, ಅವಿಷ್ಕಾರ, ಪಡೆದ ಪ್ರಶಸ್ತಿಗಳನ್ನು ಕುರಿತು ಮಕ್ಕಳಿಗೆ ತಿಳಿಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಲ್. ಇ. ಎಸ್. ಸಂಸ್ಥೆಯ ಆಡಳಿತಾಧಿಕಾರಿ ಎಸ್.ಎಸ್. ಕಪ್ಪೆಣ್ಣವರ ಮಾತನಾಡುತ್ತಾ ವಿದ್ಯಾರ್ಥಿಗಳಿಗೆ ಮುಂದೆ ಗುರಿ ಇರಬೇಕು. ಹಿಂದೆ ಗುರುಇರಬೇಕೆನ್ನತ್ತಾ ತಮಗೆ ಕಲಿಸಿದ ಗುರುಗಳನ್ನು ನೆನೆದು, ಅಂದು ಅವರು ನನಗೆ ತಿದ್ದಿ ತಿಳಿಹೇಳಿ ಅಭ್ಯಾಸದೊಂದಿಗೆ ಸಂಸ್ಕಾರವನ್ನು ಕಲಿಸಿದ್ದಕ್ಕಾಗಿ ಇಂದು ಸಮಾಜದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಯಿತು. ಎಸ್. ವಿ. ಬುರ್ಲಿ ಅವರು ತಮ್ಮ ಸೇವಾವಧಿ ಪೂರ್ತಿ ಮಕ್ಕಳಿಗೆ ಒಳ್ಳೆಯ ವಿಚಾರ, ಸಂಸ್ಕಾರ ನೀಡುತ್ತಾ ಪ್ರಾಯೋಗಿಕವಾಗಿ ವಿಜ್ಞಾನವನ್ನು ಹಾಗೂ ತಾವೆ ತಯಾರಿಸಿದ ವಿವಿಧ ಮಾದರಿಗಳನ್ನು ಉಪಯೋಗಿಸಿ ಗಣಿತವನ್ನು ಸುಲಿದ ಬಾಳೆಹಣ್ಣಿನಂತೆ ಎಂದು ತಿಳಿಸಿಕೊಟ್ಟಿದ್ದಾರೆ.

ಹೀಗಾಗಿ 29 ಪ್ರಶಸ್ತಿಗಳು ಅವರನ್ನರಿಸಿ ಬಂದಿದ್ದು ಶ್ಲಾಘನೀಯ. ನಿವೃತ್ತಿಯಾದರೂ ಅವರ ಪ್ರವೃತ್ತಿ ಮುಂದುವರೆದದ್ದು ಹಾಗೂ ಇವರೊಂದಿಗೆ ಆರ್.ಆರ್. ಮಿಸಾಳೆ ಅವರು ವೈಜ್ಞಾನಿಕ ಕಾರ್ಯಕ್ರಮಗಳನ್ನು ಮಾಡುತ್ತಿರುವುದು ಸಂತಸ ತಂದಿದೆ. ಇಂದು ನಮ್ಮ ಶಾಲೆಯಲ್ಲಿ ಅರ್ಥವತ್ತಾಗಿ ರಾಷ್ಟ್ರೀಯ ದಿನಾಚರಣೆಯನ್ನು ಆಚರಿಸಿದ್ದು ಸಂತಸ ತಂದಿದೆ ಎಂದು ತಿಳಿಸಿದರು.

"ರಾಷ್ಟ್ರೀಯ ವಿಜ್ಞಾನ ದಿನಾಚರಣೆ" ಕುರಿತು ವಿದ್ಯಾರ್ಥಿನಿಯರಾದ ಶ್ರಾವಣಿ ಭಾವಿ, ಅಕ್ಷತಾ ಗಂಜಾಳ ಮತ್ತು ಸೃಷ್ಠಿ ಆನೇಕಲ್ ಬಾಷಣ ಮಾಡಿದರು. ಪಿ.ಆರ್. ಬಂಡಿವಡ್ಡರ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕನ್ನಡಿಗರಿಗೆ ಕೆಲಸ ನೀಡದಿದ್ದರೆ ಉಗ್ರ ಹೋರಾಟ.!! ಅಶೋಕ ಹಾರಿವಾಳ

## ಕೂಡಗಿ ಗ್ರಾಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ 69 ನೇ ಗ್ರಾಮ ಘಟಕದ ಉದ್ಘಾಟನೆ

**ವರದಿ:ಲಾಲಸಾಬ ಸವಾರಗೋಳ**

**ವಿಜಯಪುರ :** ಜಿಲ್ಲೆಯ ಕೊಲ್ಹಾರ ತಾಲ್ಲೂಕಿನ ಕೂಡಗಿ ಗ್ರಾಮದಲ್ಲಿ ಅತಿ ಹೆಚ್ಚು ಭೂಮಿಯನ್ನು ಕಳೆದುಕೊಂಡು ಎನ್ ಟಿಪಿಸಿ ಯೋಜನೆಗೆ ತಮ್ಮ ಬದುಕು ತ್ಯಾಗ ಮಾಡಿದ ಈ ಗ್ರಾಮದ ಯುವಕರಿಗೆ, ಕನ್ನಡಿಗರಿಗೆ ಹೆಚ್ಚು ಪ್ರಾಶಸ್ತ್ಯ ನೀಡಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ' ಎಂದು ಕರವೇ ರಾಜ್ಯ ಸಂಘಟನಾ ಕಾರ್ಯದರ್ಶಿ ಅಶೋಕ ಹಾರಿವಾಳ ಎಚ್ಚರಿಸಿದರು.

ದೀಪವು ತನ್ನನ್ನು ತಾನು ಸುಟ್ಟುಕೊಂಡು ಇತರರಿಗೆ ಬೆಳಕು ನೀಡುವಂತೆ ಈ ಭಾಗದ ಜನ ತಮ್ಮ ಸಹಸ್ರಾರು ಎಕರೆ ಫಲವತ್ತಾದ ಜಮೀನನ್ನು ಸ್ಥಾವರಕ್ಕೆ ಧಾರೆ ಎರೆದು 5 ರಾಜ್ಯಗಳಿಗೆ ವಿದ್ಯುತ್ ನೀಡುವಲ್ಲಿ ತ್ಯಾಗ ಮಾಡಿದ್ದಾರೆ.

ಹೀಗಾಗಿ ಕನ್ನಡಿಗರಿಗೆ ಕೆಲಸದಲ್ಲಿ ಹೆಚ್ಚಿನ ಆದ್ಯತೆ ನೀಡಬೇಕೆಂದು ಆಗ್ರಹಿಸಿದರು.

ಗ್ರಾಮದ ಹಜರತ ಸೈಯದ್ ಶಹಜಾದೆ



ಮಸ್ತಾನಶಾ ಖಾದ್ರಿ ದರ್ಗಾ ಆವರಣದಲ್ಲಿ ಶನಿವಾರ, ಮೊಸರು ನಾಡಿನ ಕನ್ನಡಿಗರ ಸಮಾವೇಶದಲ್ಲಿ ಕರವೇ ಯ 69 ನೇ ಗ್ರಾಮ ಘಟಕದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಸಾನಿಧ್ಯವನ್ನು ಹಿರೇಮಠ ಬಸವನ ಬಾಗೇವಾಡಿ ಶಿವಪ್ರಕಾಶ ಶಿವಾಚಾರ್ಯರು, ದಿಗಂಬರೇಶ್ವರ ಸಂಸ್ಥಾನ ಮಠದ ಕಲ್ಲಿನಾಥ ದೇವರು, ಮೈರಾಪೀರಾ ಗೌಸಪೀರಾ ಜಾಗೀರದಾರ ಮದನಿ ವಹಿಸಿದ್ದರು.

ಕರವೇ ರಾಜ್ಯ ಉಪಾಧ್ಯಕ್ಷ ಎಂ ಸಿ ಮುಲ್ಲಾ, ಗ್ರಾಮ ಘಟಕದ ಅಧ್ಯಕ್ಷ ನಬೀಶಾ ದರವೇಶ, ಗ್ರಾಮ ಘಟಕದ ಉಪಾಧ್ಯಕ್ಷ ಶಿವಲಿಂಗಪ್ಪ ಇಬ್ರಾಹಿಂಪುರ, ಮಹಮ್ಮದ್ ಆರೀಫ್ ತಾಳಿಕೋಟಿ, ಅಬ್ಬುಬ್ರಹಿಮಾನ್ ಪತ್ತೇಮಹ್ಮದ್, ಕಾಶೀಮಸಾಬ ಕೊಡಗಾನೂರ, ಶಫೀಕ್ ಇನಾಂದಾರ, ಮಲ್ಲನಗೌಡ ಪಾಟೀಲ,ರಾಮಣ್ಣ ಗೊಲ್ಲರ, ಯಮನಪ್ಪ ಗಡದಿನ್ನಿ, ಜಾವೀದ್ ಜಾಗೀರದಾರ ಉಪಸ್ಥಿತರಿದ್ದರು.

# ಸಿಎಂ ಮತ್ತು ಡಿಸಿಎಂಗೆ ರೈತರಿಂದ ಅಣಕು ಶ್ರದ್ಧಾಂಜಲಿ

## ತೆಲಂಗಾಣಕ್ಕೆ ನೀರು ಹರಿಸಿದ್ದನ್ನು ಖಂಡಿಸಿ ಕೃಷ್ಣಾ ನದಿಗೆ ಇಳಿದು ಪ್ರತಿಭಟನೆ

**ವರದಿ:ಲಾಲಸಾಬ ಸವಾರಗೋಳ**

**ವಿಜಯಪುರ:** ಆಲಮಟ್ಟಿ,ನಾರಾಯಣಪುರ ಜಲಾಶಯಗಳಿಂದ ತೆಲಂಗಾಣಕ್ಕೆ ನೀರು ಹರಿಸಿದ್ದನ್ನು ಖಂಡಿಸಿ ಅಖಂಡ ಕರ್ನಾಟಕ ರೈತ ಸಂಘದಿಂದ ಮಂಗಳವಾರ ಕೃಷ್ಣಾ ನದಿ ತೀರದಲ್ಲಿ ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರ ಅಣಕು ಶ್ರದ್ಧಾಂಜಲಿ, ಪುಣ್ಯತಿಥಿ ಹಾಗೂ ಪಿಂಡ ಅರ್ಪಣೆ ಮಾಡಿ, ಪ್ರತಿಭಟನೆ ನಡೆಸಲಾಯಿತು.

ಮೊದಲಿಗೆ ಸಂಪ್ರದಾಯದಂತೆ ನೀರಿನಲ್ಲಿ ಮುಳುಗಿ, ಕ್ರಿಯಾ ಕರ್ಮಗಳನ್ನು ಮಾಡಿ, ಇಬ್ಬರಭಾವಚಿತ್ರಕ್ಕೆದೀಪಬೆಳಗಿಸಲಾಯಿತು. ಅಲ್ಲಿಯೇ ಕಟ್ಟಿಗೆಗಳ ಸಹಾಯದಿಂದ ಅಕ್ಕಿಯನ್ನು ಗಡಿಗೆಯಲ್ಲಿ ಕುದಿಸಿ ಅನ್ನ ತಯಾರಿಸಲಾಯಿತು.

ಅದೇ ಅನ್ನದಿಂದ ಪಿಂಡಗಳನ್ನು ಮಾಡಿ, ದರ್ಬೆ ಇಟ್ಟು, ಕರಿ ಎಳ್ಳು ಹಾಕಿ ಪೂಜೆ ಸಲ್ಲಿಸಲಾಯಿತು. ಪಿಂಡಗಳನ್ನು ಹಾಗೂ ಭಾವಚಿತ್ರಗಳನ್ನು ಕೃಷ್ಣಾ ನದಿಗೆ ಅರ್ಪಣೆ ಮಾಡಿ, ವಿನೂತನವಾಗಿ ಪ್ರತಿಭಟಿಸಲಾಯಿತು.ಕೃಷ್ಣಾ ನದಿಗೆ ಇಳಿದು



ಪ್ರತಿಭಟನೆ ಮಾಡಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ರೈತರು ಕೂಗಿದರು.

ರೈತ ಮುಖಂಡ ಅರವಿಂದ ಕುಲಕರ್ಣಿ ಮಾತನಾಡಿ, ರಾಜ್ಯದ ರೈತರ ಮೇಲೆ ಕಳಕಳಿ ಇಲ್ಲದ ಸರ್ಕಾರ ತೆಲಂಗಾಣ ರಾಜ್ಯಕ್ಕೆ ನಿರಂತರವಾಗಿ ನೀರು ಹರಿಸಿ ಆಲಮಟ್ಟಿ ಜಲಾಶಯದ ನೀರನ್ನು ಸಂಪೂರ್ಣ ಖಾಲಿ ಮಾಡಲು ಹೊರಟಿದೆ.ತೆಲಂಗಾಣಕ್ಕೆಕೇವಲ 1.24 ಟಿಎಂಸಿ ಅಡಿ ಮಾತ್ರ ನೀರು ಹರಿ ಬಿಟ್ಟಿದ್ದೇವೆ ಎಂದು ಸುಳ್ಳು ಹೇಳಿ 10 ಟಿಎಂಸಿ ಅಡಿಗೂ ಹೆಚ್ಚು ನೀರು ಹರಿಸಲಾಗಿದೆ.

ಈ ಬಗ್ಗೆ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.ನಿತ್ಯ ಆಲಮಟ್ಟಿಯಿಂದ 12,500 ಕ್ಯುಸೆಕ್ ನಷ್ಟು ನೀರನ್ನು ನಾರಾಯಣಪುರ ಜಲಾಶಯಕ್ಕೆ ಹರಿಸುವ ಉದ್ದೇಶವಾದರೂ ಏನು ಎಂದು ಅವರು ಪ್ರಶ್ನಿಸಿದರು.

ಜಿಲ್ಲೆಯ ಯಾವೊಬ್ಬ ಜನಪ್ರತಿನಿಧಿಗಳು ಇದನ್ನು ಪ್ರಶ್ನಿಸುತ್ತಿಲ್ಲ, ಪ್ರತಿಭಟಿಸುತ್ತಿಲ್ಲ, ವಿರೋಧ ಪಕ್ಷದವರು ಸುಮ್ಮನಿರುವುದು ಜಿಲ್ಲೆಯ ದೌರ್ಭಾಗ್ಯ ಎಂದರು.

ಅಖಂಡ ಕರ್ನಾಟಕ ರೈತ ಸಂಘದ ಮುಖಂಡ ವಿಠಲಬಿರಾದಾರ,ಹೊನಕೇರೆಪ್ಪ ತೆಲಗಿ, ಈರಪ್ಪ ಹಂಚನಾಳ,
ಸೋಮು ಬಿರಾದಾರ, ಬಾಲಪ್ಪಗೌಡ ಲಿಂಗದಳ್ಳಿ ರಾಮನಗೌಡ ಹಾದಿಮನಿ ಮಲ್ಲಪ್ಪ ಪಡಸಲಗಿ, ಗಿರಿಮಲ್ಲಪ್ಪ ದೊಡಮನಿ, ಪುತ್ರಪ್ಪ ಬೂದಗೋಳಿ, ದಾವಲಸಾಬ ನದಾಫ್, ಹಣಮಂತ್ರಾಯ ಹಂದ್ರಾಳ, ರಾಜೇಸಾಬ ವಾಲಿಕಾರ, ಈರಣ್ಣ ದೇವರಗುಡಿ ಮೋತಿಲಾಲ್ ಲಮಾಣಿ ಶೆಟ್ಟೆಪ್ಪ ಲಮಾಣಿ ಸಿದ್ದನಗೌಡ ಕುಂಟೋಜಿ ಬಸನಗೌಡ ಪಾಟೀಲ ಚಂದ್ರಶೇಖರ ಪಾಟೀಲ ಹಣಮಂತ್ರಾಯ ಗುಣಕಿ ಇದ್ದರು.

# ಎಚ್ 5 ಎನ್ 1 ಹಕ್ಕಿಜ್ವರ: ರೋಗ ತಡೆಗಟ್ಟಲು ಜಿಲ್ಲೆ ಸಿದ್ಧ

**ಬೆಳಗಾವಿ :** ನೆರೆಯ ಮಹಾರಾಷ್ಟ್ರ ರಾಜ್ಯದ ಲಾತೂರಿನ ಉದಯಗಿರಿಯಲ್ಲಿ ಎಚ್ 5 ಎನ್ 1 ಹಕ್ಕಿಜ್ವರ (ಕೋಳಿ ಶೀತ ಜ್ವರ) ರೋಗೋದ್ರೇಕ ಪತ್ತೆಯಾಗಿದ್ದು, ಗಡಿ ಭಾಗವಾದ ಬೆಳಗಾವಿ ಜಿಲ್ಲೆಯಲ್ಲಿ ರೋಗೋದ್ರೇಕ ಉಂಟಾಗದಂತೆ ಜಿಲ್ಲಾಡಳಿತ, ಜಿಲ್ಲಾ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,ಆರೋಗ್ಯಮತ್ತುಕುಟುಂಬಕಲ್ಯಾಣಇಲಾಖೆ ಹಾಗೂ ಜಿಲ್ಲಾ ಅರಣ್ಯ ಇಲಾಖೆಗಳ ಸಹಯೋಗದೊಂದಿಗೆ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಪಶುಪಾಲನಾ ಇಲಾಖೆ ಉಪನಿರ್ದೇಶಕರಾದ ರಾಜೀವ ಕೂಲೇರ ಅವರು ತಿಳಿಸಿರುತ್ತಾರೆ.

20 ನೇ ಜಾನುವಾರು ಗಣತಿಯ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ 26.40 ಲಕ್ಷ ಮಾಂಸ / ಮೊಟ್ಟೆ ಕೋಳಿಗಳಿವೆ. ಕೇಂದ್ರ ಸರ್ಕಾರದ ಮುನ್ನೆಚ್ಚರಿಕಾ ಕ್ರಮಗಳನ್ವಯ ಈಗಾಗಲೇ ಜಿಲ್ಲೆಯ ಗಡಿಭಾಗಗಳಾದ ಅಥಣಿ ತಾಲ್ಲೂಕಿನ ಕೊಟ್ಟಲಗಿ, ಕಾಗವಾಡ, ನಿಪ್ಪಾಣಿ ತಾಲ್ಲೂಕಿನ ಕೊಗನೊಳ್ಳಿ, ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಬೆಳಗಾವಿ ತಾಲ್ಲೂಕಿನ ಹಿಂಡಲಗಾ, ಚಿಕ್ಕೋಡಿ ತಾಲ್ಲೂಕಿನ ಯಕ್ಸಂಬಾ ಮತ್ತು ಖಾನಾಪೂರ ತಾಲ್ಲೂಕಿನ ಕಣಕುಂಬಿ ಸೇರಿ ಒಟ್ಟು 07 ಚೆಕ್ ಪೋಸ್ಟಗಳನ್ನು ಜಿಲ್ಲಾಪಶುಪಾಲನಾಮತ್ತುಪಶುವೈದ್ಯಕೀಯಸೇವಾಇಲಾಖೆ ವತಿಯಿಂದ ಪ್ರಾರಂಭಿಸಿ ಪ್ರತಿಯೊಂದು ಚೆಕ್ ಪೋಸ್ಟಗಳಲ್ಲಿ ಪ್ರತಿ 08 ಗಂಟೆಗಳಿಗೆ ಇಬ್ಬರಂತೆ 03 ಪಾಳೆಯಗಳಲ್ಲಿ 24/7 ಕಾರ್ಯನಿರ್ವಹಿಸುವಂತೆ ಸಿಬ್ಬಂದಿಗಳನ್ನು ನೀಯೋಜಿಸಲಾಗಿದ್ದು, ಮಹಾರಾಷ್ಟ್ರದಿಂದ ಬರುವ ಕೋಳಿ, ಮೊಟ್ಟೆ, ಕೋಳಿ ಮಾಂಸ ಹಾಗೂ ಕೋಳಿಯ ಉಪ ಉತ್ಪನ್ನಗಳನ್ನು ಚೆಕ್ ಪೋಸ್ಟಗಳಲ್ಲಿ ತಪಾಸಣೆ ಕೈಗೊಳ್ಳಲಾಗುತ್ತಿದೆ. ಜಿಲ್ಲೆಯ ಎಲ್ಲಾ ತಾಲ್ಲೂಕಿನ ನದಿ ಅಂಚಿನ ಗ್ರಾಮಗಳಲ್ಲಿಹಾಗೂಕೆರೆಕುಂಟೆಸುತ್ತಮುತ್ತಲಿನಪ್ರದೇಶಗಳಲ್ಲಿ ಜಮೆಯಾಗುವವಲಸೆಹಕ್ಕಿಗಳುಮತ್ತುಇತರೆಹಕ್ಕಿಗಳಮೇಲೆ ತೀವ್ರ ನಿಗಾವಹಿಸಲಾಗುತ್ತಿದೆ. ಅಂತಹ ಸ್ಥಳಗಳಲ್ಲಿ ಹಕ್ಕಿಗಳ ಅಸಹಜ ಸಾವು ಕಂಡುಬಂದಲ್ಲಿ ರೋಗದ ಧೃಢೀಕರಣಕ್ಕಾಗಿ ಮರಣಿಸಿದ ಹಕ್ಕಿಯ ದೇಹವನ್ನು ನಿಯಮಾನುಸಾರ ಎಸ್. ಆರ್.ಡಿ.ಡಿ.ಎಲ್. ಬೆಂಗಳೂರು ಇವರಿಗೆ ಸಲ್ಲಿಸಲು ಎಲ್ಲಾ ತಾಲ್ಲೂಕಿನಮುಖ್ಯಪಶುವೈದ್ಯಾಧಿಕಾರಿಗಳಿಗೆಸೂಚಿಸಲಾಗಿದೆ. ಕಾಲಕಾಲಕ್ಕೆ ವಿವಿಧ ಮಾದರಿಗಳನ್ನು ಸಂಗ್ರಹಿಸಿ ಕೋಳಿಶೀತ ಜ್ವರ ದೃಢೀಕರಣಕ್ಕಾಗಿ ನಿಯಮಿತವಾಗಿ ತಾಲ್ಲೂಕಿನಲ್ಲಿರುವ ಕೋಳಿಫಾರಂಗಳಿಂದಪ್ರತಿಸೋಮವಾರಪ್ರತಿತಾಲ್ಲೂಕಿನಿಂದ ಎರಡು ಪರಿಸರ ಮಾದರಿ, ಎರಡು ಸೀರಂ ಮಾದರಿ, ಎರಡು ಕ್ಲೋಯೆಕಲ್‌ಮಾದರಿ,ಎರಡುಟ್ರೇಕಿಯಲ್‌ಮಾದರಿಗಳನ್ನು ನಿಯಮಾನುಸಾರ ಸಂಗ್ರಹಿಸಿ ರೋಗ ಪತ್ತೆಗಾಗಿ ಪಶು ರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರ, ಬೆಳಗಾವಿಯಲ್ಲಿ ಸಲ್ಲಿಸಲಾಗುತ್ತಿದೆ. ಈವರೆಗೂ ಬೆಳಗಾವಿ ಜಿಲ್ಲೆಯಿಂದ 363 ಸೀರಂ, 363 ಕ್ಲೋಯೆಕಲ್, 363 ಟ್ರೇಕಿಯಲ್ ಮತ್ತು 138 ಪರಿಸರ ಮಾದರಿಗಳನ್ನು ಪಶು ರೋಗ ತನಿಖಾ ಪ್ರಯೋಗಾಲಯಕ್ಕೆ ಸಲ್ಲಿಸಲಾಗಿದೆ.

ಕೋಳಿಶೀತ ಜ್ವರ ನಿಯಂತ್ರಣ ಕಾರ್ಯಕ್ರಮಕ್ಕೆ ಜಿಲ್ಲಾ ಮಟ್ಟದಲ್ಲಿ ಒಬ್ಬ ನೋಡಲ್ ಅಧಿಕಾರಿ ಹಾಗೂ ಒಬ್ಬ ತಾಂತ್ರಿಕ ಸಹಾಯಕರನ್ನು ಹಾಗೂ 15 ತಾಲ್ಲೂಕು ಮುಖ್ಯಪಶುವೈದ್ಯಾಧಿಕಾರಿ(ಆಡಳಿತ) ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರಕಾರ್ಯಾಚರಣೆಗಾಗಿಕ್ಷಿಪ್ರಕಾರ್ಯಾಚರಣೆಪಡೆಯನ್ನು (Rapid Rsponse Team) ರಚಿಸಲಾಗಿದ್ದು, ಒಂದು ತಂಡವು ನುರಿತ ಪಶುವೈದ್ಯಾಧಿಕಾರಿ, ಒಬ್ಬ ಸಹಾಯಕ ಸಿಬ್ಬಂದಿ ಮತ್ತು 02 ಅನುಚರರನ್ನು ಒಳಗೊಂಡಿರುತ್ತದೆ ಎಂದು ಪಶುಪಾಲನಾ ಇಲಾಖೆ ಉಪನಿರ್ದೇಶಕರಾದ ರಾಜು ಕೂಲೇರ ಅವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

**ಜಿಲ್ಲಾಧಿಕಾರಿಗಳ ಹೇಳಿಕೆ:** ನೆರೆಯ ತೆಲಂಗಾಣ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಎಚ್ 5 ಎನ್ 1 ಹಕ್ಕಿಜ್ವರ (ಕೋಳಿ ಶೀತ ಜ್ವರ) ರೋಗೋದ್ರೇಕಗಳು ಪತ್ತೆಯಾಗಿದ್ದು, ಗಡಿ ಭಾಗವಾದ ಬೆಳಗಾವಿ ಜಿಲ್ಲೆಯಲ್ಲಿ ಮುನ್ನೇಚ್ಚರಿಕಾ ಕ್ರಮವಾಗಿ ಜಿಲ್ಲಾಡಳಿತ, ಜಿಲ್ಲಾ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,ಆರೋಗ್ಯಮತ್ತುಕುಟುಂಬಕಲ್ಯಾಣಇಲಾಖೆ ಹಾಗೂ ಜಿಲ್ಲಾ ಅರಣ್ಯ ಇಲಾಖೆಗಳ ಸಹಯೋಗದೊಂದಿಗೆ ಸಭೆ ಜರುಗಿಸಿ ರೋಗೋದ್ರೇಕವನ್ನು ತಡೆಗಟ್ಟಲು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮುಂದುವರೆದು ಜಿಲ್ಲೆಯಲ್ಲಿ ಒಟ್ಟು 07 ಚೆಕಪೋಸ್ಟಗಳನ್ನು ರಚಿಸಲಾಗಿದೆ. ಕ್ಷೇತ್ರ ಕಾರ್ಯಾಚರಣೆಗಾಗಿ 33 ಕ್ಷಿಪ್ರ ಕಾರ್ಯಾಚರಣೆ ಪಡೆಗಳನ್ನು (ಖಚಿರಿಜ ಖಠಿಂಟಿಜ ಖಿಜಚಿಟ) ರಚಿಸಿ, ಚೆಕ್ ಪೋಸ್ಟಗಳಲ್ಲಿ ಪ್ರತಿ 08 ಗಂಟೆಗಳಿಗೆ ಇಬ್ಬರಂತೆ03ಪಾಳೆಯಗಳಲ್ಲಿ24/7ಕಾರ್ಯನಿರ್ವಹಿಸುವಂತೆ ಸಿಬ್ಬಂದಿಗಳನ್ನು ನೀಯೋಜಿಸಲಾಗಿದ್ದು, ಮಹಾರಾಷ್ಟ್ರದಿಂದ ಬರುವ ಕೋಳಿ, ಮೊಟ್ಟೆ, ಕೋಳಿ ಮಾಂಸ ಹಾಗೂ ಕೋಳಿಯ ಉಪ ಉತ್ಪನ್ನಗಳನ್ನು ಚೆಕ್ ಪೋಸ್ಟಗಳಲ್ಲಿ ತಪಾಸಣೆ ಕೈಗೊಳ್ಳಲಾಗುತ್ತಿದೆ. ರೋಗೋದ್ರೇಕ ಉಂಟಾದಲ್ಲಿ ಜಿಲ್ಲಾಡಳಿತವು ರೋಗೋದ್ರೇಕವನ್ನು ತಡೆಗಟ್ಟಿ ಮರಣ ಹೊಂದಿದ ಕೋಳಿಗಳನ್ನು ಸುರಕ್ಷಿತವಾಗಿ ವಿಲೇವಾರಿ ಮಾಡಲು ಬೇಕಾದಂತಹ ಸೋಂಕು ನಿವಾರಕಗಳು, ಪಿ.ಪಿ.ಇ ಕಿಟ್, ಜೆ.ಸಿ.ಬಿಗಳು, ಫಾಗಿಂಗ್ ಮಷಿನ, ಗನ್ನಿ ಬ್ಯಾಗ್ ಹಾಗೂ ಇನ್ನಿತರೆ ಅವಶ್ಯಕ ಸಾಮಗ್ರಿಗಳನ್ನು ಕ್ರೋಢಿಕರಿಸಲು ಕ್ರಮವಹಿಸಲಾಗಿದೆ.

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹೇಳಿಕೆ:** ಕೋಳಿಸಾಕಾಣಿಕೆದಾರರಿಗೆ / ಕೋಳಿ ಉದ್ಯಮಿದಾರರಿಗೆ ಕೋಳಿಶೀತ ಜ್ವರದ ಕುರಿತು ಮಾಹಿತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲು ಪಶು ಪಾಲನಾ ಇಲಾಖೆಯವರಿಗೆ ಸೂಚಿಸಲಾಗಿದೆ. ಈ ರೋಗವು ಪಾರಣಿಜನ್ಯ ಪ್ರಾಮುಖ್ಯತೆಯನ್ನು ಪಡೆದಿರುವುರಿಂದ ಪಶು ಪಕ್ಷಿಗಳಿಂದ ಸಹ ಮನುಷ್ಯರಿಗೂ ಹರಡುವ ಸಂಭವವಿರುತ್ತದೆ. ಆದರೆ ಜಿಲ್ಲೆಯಲ್ಲಿಕೋಳಿಶೀತಜ್ವರದರೋಗೋದ್ರೇಕದಯಾವುದೇ ಪ್ರಕರಣಗಳು ಪತ್ತೆಯಾಗಿರುವುದಿಲ್ಲ. ಕೋಳಿ ಮಾಂಸ ಮತ್ತು ಮೊಟ್ಟೆಗಳ ಸೇವಿಸುವ ಪ್ರಿಯರು ಯಾವುದೇ ಆತಂಕ ಪಡುವ ಅಗತ್ಯವಿರುವುದಿಲ್ಲ.

# ಬೆಳಗುಂದಿ-ಬಿಜಗರಣಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ



**ಬೆಳಗಾವಿ :** ಬೆಳಗಾವಿ ಗ್ರಾಮೀಣ ಕ್ಷೇತ್ರದ ಬೆಳಗುಂದಿ ಗ್ರಾಮದ ಪ್ರೌಢಶಾಲೆಯಿಂದ ಬಿಜಗರಣಿ ಕ್ರಾಸ್ ವರೆಗಿನ ರಸ್ತೆ ನಿರ್ಮಾಣದ ಕಾಮಗಾರಿಗೆ ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್ ಸ್ಥಳೀಯ ಮುಖಂಡರೊಂದಿಗೆ ಸೇರಿ ಭೂಮಿ ಪೂಜೆ ನೆರವೇರಿಸಿದರು.

ಕ್ಷೇತ್ರದ ಶಾಸಕರು ಹಾಗೂ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಅವರ ವಿಶೇಷ ಪ್ರಯತ್ನದಿಂದ ರಸ್ತೆ ನಿರ್ಮಾಣದ ಕಾಮಗಾರಿಗೆ ಸುಮಾರು 23 ಲಕ್ಷ ರೂ,ಗಳು ಬಿಡುಗಡೆಯಾಗಿದೆ. ಸ್ಥಳೀಯರ ಸಲಹೆ, ಸೂಚನೆ ಪಡೆದು ಆದಷ್ಟು ಬೇಗ ರಸ್ತೆ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಯಿತು.

ಈ ವೇಳೆ ಮನೋಹರ್ ಬೆಳಗಾಂವ್ಕರ್, ರಹಿಮಾನ್ ತಹಶಿಲ್ದಾರ, ದಯಾನಂದ ಗಾವಡಾ, ಸುರೇಶ ಕೀಣೆಕರ್, ಪ್ರಹ್ಲಾದ ಚಿರಮುರ್ಕರ್, ಯಲ್ಲಪ್ಪ ಶಹಾಪೂರ್, ಮೆಹಬೂಬ್ ಮುಜಾವರ್, ಹೇಮಾ ಹದಗಲ್, ನಿಂಗೂಲಿ ಚೌಹಾನ್, ಶಿವಾಜಿ ಮಂಡೋಳ್ಕರ್, ನಾರಾಯಣ ಚೌಹಾನ್, ರಾಜು ಮುಜಾವರ್, ಮಹೇಶ ಪಾಟೀಲ, ಸಂತೋಷ ಕಾಂಬಳೆ, ಲಕ್ಷ್ಮಣ ಗಾವಡಾ, ಲಕ್ಷ್ಮಣ ಪಾಟೀಲ, ಪರಶುರಾಮ ಹದಗಲ್, ಲಕ್ಷ್ಮಣ ಮುಗಟಕರ್, ಹನಮಂತ ಗೋಡ್ಸೆ, ಮಹಾದೇವ್ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

# ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಬದ್ಧ: ಶಾಸಕ ಸವದಿ



**ಅಥಣಿ :** ಗ್ರಾಮೀಣ ಭಾಗದಲ್ಲಿರುವ ಜನರ ಜೀವನ ಮಟ್ಟ ಸುಧಾರಣೆ, ಶೈಕ್ಷಣಿಕ ಪ್ರಗತಿ, ಕೃಷಿಕರ ಆರ್ಥಿಕ ಸ್ವಾವಲಂಬನೆ, ದುಡಿಯುವ ಕೈಗಳಿಗೆ ಉದ್ಯೋಗ, ಶುದ್ಧ ಕುಡಿಯುವ ನೀರು ಪೂರೈಕೆ, ಉತ್ತಮ ರಸ್ತೆ ನಿರ್ಮಾಣ ಹೀಗೆ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನ ಹಾಕಿ ಕೊಳ್ಳುವ ಮೂಲಕ ತಾಲೂಕಿನ ಎಲ್ಲ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಸದಾ ಸಿದ್ಧನಾಗಿದ್ದೇನೆ ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ತಾಲೂಕಿನ ಅವರಖೋಡ ಗ್ರಾಮದಲ್ಲಿ ಸುಮಾರು 1 ಕೋಟಿ 10 ಲಕ್ಷ ರೂಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡುತ್ತಿದ್ದರು.

ಗ್ರಾಮಗಳ ಅಭಿವೃದ್ಧಿಯಿಂದ ದೇಶದ ಅಭಿವೃದ್ಧಿ ಸಾಧ್ಯ. ಒಟ್ಟಿನಲ್ಲಿ ಸಮಗ್ರ ತಾಲೂಕಿನ ಅಭಿವೃದ್ಧಿಯೇ ನನ್ನ ಪ್ರಥಮ ಆದ್ಯತೆಯಾಗಿದೆ. ಹಂತಹಂತವಾಗಿ ಪ್ರತಿ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ನಿಗದಿತ ಅವಧಿಯಲ್ಲಿ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಈ ವೇಳೆ ಕೆಆರ್ ಐಡಿಎಲ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಸದಾಶಿವಯ್ಯ. ಸಹಾಯಕ ಅಭಿಯಂತರ ಸಂತೋಷ ಶೇಗುಣಸಿ. ಕೆಎಂಎಫ್ ನಿರ್ದೇಶಕ ಮಹಾದೇವ ಬಿಳಿಕುರಿ, ಗ್ರಾಮ ಪಂಚಾಯತ ಅಧ್ಯಕ್ಷ ಶ್ರೀಕಾಂತ ದರೂರ, ಪಿಕೆಪಿಎಸ್ ಅಧ್ಯಕ್ಷ ಉದಯ ಲಡಗಿ, ಗುತ್ತಿಗೆದಾರ ಗಜಾನನ ಜಂಬಗಿ. ಜಡೇಪ್ಪಾ ಕುಂಬಾರ. ಪ್ರಶಾಂತ ಅಕ್ಕೋಳ, ಶಿವಶಂಕರ ನಾಯಿಕ, ಬೀರಪ್ಪ ಲೋಕುರ, ಅಶೋಕ ಲಡಗಿ, ಮುರೇಪ್ಪಾ ಲೋಕುರ. ಮಲ್ಲಪ್ಪ ದರೂರ, ಅಜೀತ ಕಾಗವಾಡ. ಮಲ್ಲು ಕುಲ್ಲೋಳಿ ಮುತ್ತು ಮೋಕಾಶಿ, ಶ್ರೀನಿವಾಸ್ ಪಟ್ಟಣ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ನುಡಿದಂತೆ ನಡೆದ ಕೀರ್ತಿ ಡಾ.ಮಹಾಂತ ಶಿವಯೋಗಿಗಳಿಗೆ ಸಲ್ಲುತ್ತದೆ

**ಅಥಣಿ :** ಬಸವ ತತ್ವಗಳನ್ನು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ನುಡಿದಂತೆ ನಡೆದ ಕೀರ್ತಿ ಸವದಿ ಇಳಕಲ್ ಮಠದ ಲಿಂ. ಡಾ ಮಹಾಂತ ಶಿವಯೋಗಿಗಳಿಗೆ ಸಲ್ಲುತ್ತದೆ ಎಂದು ಹಾರೂಗೇರಿಯ ಶರಣ ವಿಚಾರ ವಾಹಿನಿಯ ಅಧ್ಯಕ್ಷ ಆಯ್. ಆರ್. ಮಠಪತಿ ಹೇಳಿದರು.

ಅವರು ತಾಲೂಕಿನ ಸವದಿ ಗ್ರಾಮದ ಲಿಂ. ಶ್ರೀ ಸಂಗನ ಬಸವ ಶಿವಯೋಗಿಗಳವರ 83ನೇ ಸ್ಮರಣೋತ್ಸವ ಹಾಗೂ ಲಿಂ. ಡಾ.ಮಹಾಂತ ಶಿವಯೋಗಿಗಳವರ ಸ್ಮರಣೋತ್ಸವದ ಅಂಗವಾಗಿ ಶುಕ್ರವಾರ ರಾತ್ರಿ ಜರುಗಿದ ಶರಣ ಸಂಸ್ಕೃತಿ ಮಹೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಡಾ. ಮಹಾಂತ ಶಿವಯೋಗಿಗಳು ಅನೇಕ ಜನರನ್ನು ದುಶ್ಚಟಗಳಿಂದ ಶಾಶ್ವತ ದೂರ ಮಾಡಿ ಕಣ್ಣೀರಿಡುವ ಕುಟುಂಬಗಳಿಗೆ ನೆಮ್ಮದಿಯ ಜೀವನ ಕಲ್ಪಿಸಿದ್ದಾರೆ. ಅವರ ಬದುಕಿನ ಪ್ರತಿಯೊಂದು ಸಮಯವು ಚರಿತ್ರೆಯಲ್ಲಿ ಮೈಲುಗಲ್ಲಾಗಿ ಉಳಿದಿದೆ.




ಪ್ರತಿಯೊಬ್ಬರ ಬದುಕನ್ನು ಸಕಾರಾತ್ಮಕವಾಗಿ ಬದಲಿಸುವ ಶಕ್ತಿ ಅವರಿಗೆ ಸಾಧ್ಯವಾಗಿತ್ತು. ಇಂದಿನ ದಿನಗಳಲ್ಲಿ ಮನುಷ್ಯ ಮನುಷ್ಯನಂತೆ ಸಂಸ್ಕಾರದಿಂದ ಬದುಕಿದರೆ ಪೊಲೀಸ್ ಠಾಣೆ, ಕೋರ್ಟ್ ಕಚೇರಿಗಳಿಗೆ ಅಲೆದಾಟ ಬೇಕಿಲ್ಲ ಎಂದು ಅವರು ಹೇಳಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಸವದಿ ಇಳಕಲ್ ಮಠದ ಶ್ರೀ ಗುರುಮಹಾಂತ ಸ್ವಾಮೀಜಿ ಮಾತನಾಡಿ ಸಂಗನಬಸವ ಶಿವಯೋಗಿಗಳು ಹಾಗೂ ಡಾ. ಮಹಾಂತ ಶಿವಯೋಗಿಗಳು ಪ್ರತಿಯೊಬ್ಬರಿಗೂ ದಾರಿ ದೀಪವಾಗಿದ್ದಾರೆ. ಈ ಇಬ್ಬರೂ ಮಹಾತ್ಮರು ತೋರಿದ ದಾರಿಯಲ್ಲಿ ಪ್ರತಿಯೊಬ್ಬರೂ ಸಾಗೋಣವೆಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ತಿಕೋಟಾದ ಮಲ್ಲಿಕಾರ್ಜುನ ಸ್ವಾಮೀಜಿ, ಜನವಾಡದ ಮಲ್ಲಿಕಾರ್ಜುನ ಸ್ವಾಮೀಜಿ, ನಿಪ್ಪಾಣಿಯ ಮಲ್ಲಿಕಾರ್ಜುನ ಸ್ವಾಮೀಜಿ, ಅಶೋಕ ಬರಗುಂಡಿ, ರವಿ ಯಡಹಳ್ಳಿ, ಸಿದ್ದಲಿಂಗಪ್ಪ ಬರಗುಂಡಿ, ವೆಂಕಟಾಪುರದ ಬಸವ ರಾಜಪ್ಪನವರು, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎಸ್. ಎಲ್. ಬಾಡಗಿ, ನ್ಯಾಯವಾದಿ ಡಿ. ಬಿ. ಠಕ್ಕಣ್ಣವರ, ಸುಜಾತಾ ಠಕ್ಕಣ್ಣವರ, ಭರವಸೆ ಬೆಳಕು ಫೌಂಡೇಶನ್ ಅಧ್ಯಕ್ಷೆ ರೂಪಾ ಕಾಂಬಳೆ. ಸಿದ್ದರಾಮ ಖಾನಾಪುರ, ಭೀಮಣ್ಣ ಗಾಳಿ, ಸಂಗನಗೌಡ ಪಾಟೀಲ, ಅಪ್ಪಾಲಾಲ್ ಪಾರ್ಥನಳ್ಳಿ, ಸಂಗಣ್ಣ ಗೂಗವಾಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಸಂಭ್ರಮ ಮುತ್ತೂರು ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಸ್ವಾತಿ ಸಿದ್ದರ ಅವರನ್ನು ಶ್ರೀಮಠದಿಂದ ಗೌರವಿಸಿ ಸತ್ಕರಿಸಲಾಯಿತು. ಪ್ರಕಾಶ ಪಾಟೀಲ ನಿರೂಪಿಸಿ ವಂದಿಸಿದರು.

# ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ ಅರ್ಥಪೂರ್ಣವಾಗಿ ಆಚರಿಸೋಣ: ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ



**ಕೊಪ್ಪಳ :** ಮಾರ್ಚ್ 15 ರಂದು ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸೋಣ ಎಂದು ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಹೇಳಿದರು.

ಅವರು ಶುಕ್ರವಾರ ಸಹಾಯಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಕರೆದ ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ ಆಚರಣೆ ಕುರಿತಾದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿಯನ್ನು ಮಾರ್ಚ್ 14ರ ಬದಲಿಗೆ ಮಾ. 15 ರಂದು ಸರಳವಾಗಿ ಆಚರಿಸಬೇಕೆಂಬ ಸಮುದಾಯಗಳ ಮುಖಂಡರ ಕೋರಿಕೆ ಮೇರೆಗೆ ಅಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಈ ಇಬ್ಬರೂ ಮಹನಿಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಪುಷ್ಪಾರ್ಚನೆ ಮಾಡಿ ಗೌರವಿಸಲಾಗುವುದು. ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿರಬೇಕೆಂದು ಹೇಳಿದರು.

ಜಯಂತಿ ದಿನದಂದು ಎಲ್ಲಾ ಶಾಲಾ-ಕಾಲೇಜುಗಳು ಹಾಗೂ ಸರಕಾರಿ ಕಛೇರಿಗಳಲ್ಲಿ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಬೇಕು. ಜಯಂತಿ ಆಚರಣೆ ಕುರಿತು ಜನ ಪ್ರತಿನಿಧಿಗಳಿಗೂ ಮಾಹಿತಿ ನೀಡಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ಇತರೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಈ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಬೇಕು. ಜಯಂತಿ ನಿಮಿತ್ತ ಜಿಲ್ಲಾಡಳಿತ ಭವನದಲ್ಲಿ ನಡೆಯುವ ಪೂಜಾ ಕಾರ್ಯಕ್ರಮಕ್ಕೆ ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಿಬ್ಬಂದಿ ತಿಪ್ಪಯ್ಯ ನಾಯ್ಡು, ಸಮಾಜದ ಮುಖಂಡರಾದ ಶ್ರೀನಿವಾಸ ಕಟ್ಟಿಮನಿ, ವಿನಯ ಕಟ್ಟಿಮನಿ, ವರಲಕ್ಷ್ಮೀ ಪಂಪಾಪತಿ, ಗೀರಿಶ್‌ಕನಕಗಿರಿ,ಶ್ರೀಕಾಂತಕನಕಗಿರಿಹಾಗೂ ಮತ್ತಿತರರು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ತೋಟಗಾರಿಕಾ ತರಬೇತಿಗೆ ಅರ್ಜಿ ಆಹ್ವಾನ

**ಕೊಪ್ಪಳ :** ತೋಟಗಾರಿಕಾ ಇಲಾಖೆಯಿಂದ 2025-26ನೇ ಸಾಲಿನಲ್ಲಿ ರೈತರ ಮಕ್ಕಳಿಗೆ 10 ತಿಂಗಳ ತೋಟಗಾರಿಕೆ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ತೋಟಗಾರಿಕೆ ತರಬೇತಿಯು ಮುನಿರಾಬಾದ್ ಗ್ರಾಮದಲ್ಲಿರು ತರಬೇತಿ ಕೇಂದ್ರದಲ್ಲಿ 2025ರ ಮೇ 2 ರಿಂದ 2026ರ ಫೆಬ್ರವರಿ 28ರ ವರೆಗೆ ನಡೆಯಲಿದ್ದು, ಕೊಪ್ಪಳ ಜಿಲ್ಲೆಯ ಆಸಕ್ತ ರೈತ ಮಕ್ಕಳು ಅರ್ಜಿ ಸಲ್ಲಿಸಬಹುದಾಗಿದೆ.

ಈ ತರಬೇತಿಗಾಗಿ ಸಾಮಾನ್ಯ ಅಭ್ಯರ್ಥಿ 16, ಪರಿಶಿಷ್ಠ ಜಾತಿ 3 ಮತ್ತು ಪರಿಶಿಷ್ಟ ಪಂಗಡ 1 ರಂತೆ ಒಟ್ಟು 20 ಅಭ್ಯರ್ಥಿಗಳ ಗುರಿ ನಿಗದಿ ಪಡಿಸಲಾಗಿದೆ. ವಯೋಮಿತಿಯು ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಂಗವಿಕಲರಿಗೆ ಕನಿಷ್ಠ 18 ವರ್ಷ ಗರಿಷ್ಠ 33 ವರ್ಷ, ಮಾಜಿ ಸೈನಿಕರಿಗೆ 33 ರಿಂದ ಗರಿಷ್ಠ 65 ವರ್ಷ ಹಾಗೂ ಇತರರಿಗೆ ಕನಿಷ್ಠ 18 ವರ್ಷ ಗರಿಷ್ಠ 30 ವರ್ಷ. ಕನ್ನಡ ವಿಷಯಗಳೊಂದಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅಭ್ಯರ್ಥಿಯು ಚೆನ್ನಾಗಿ ಕನ್ನಡ ಓದುವುದು, ಬರೆಯುವುದು ಮತ್ತು ಮಾತನಾಡುವುದನ್ನು ಬಲ್ಲವರಾಗಿರಬೇಕು. ಈ ತರಬೇತಿಯು ರೈತರ ಮಕ್ಕಳಿಗಾಗಿರುವುದರಿಂದ ಅಭ್ಯರ್ಥಿಯ ತಂದೆ, ತಾಯಿ ಅಥವಾ ಪೋಷಕರು (ತಂದೆ/ತಾಯಿ ಇಲ್ಲದ ಪಕ್ಷದಲ್ಲಿ) ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು. ಈ ಬಗ್ಗೆ ಪಹಣಿಯನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಅಭ್ಯರ್ಥಿಗಳು ತೋಟದ ಕೆಲಸಗಳನ್ನು ಮಾಡುವಷ್ಟು ದೃಢಕಾಯರಾಗಿರಬೇಕು.

ಅರ್ಜಿಶುಲ್ಕ: ಸಾಮಾನ್ಯ ಅಭ್ಯರ್ಥಿಗಳಿಗೆ ರೂ. 30, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರೂ.15 ಪೋಸ್ಟಲ್ ಆರ್ಡರ್(ಐಪಿಓ) ಅಥವಾ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ)ನ್ನು ತೋಟಗಾರಿಕೆ ಉಪನಿರ್ದೇಶಕರು(ಜಿ.ಪಂ)ಕೊಪ್ಪಳರವರಹೆಸರಿನಲ್ಲಿ ಪಡೆದು ಅರ್ಜಿ ಜೊತೆಗೆ ಲಗತ್ತಿಸಬೇಕು. ಅರ್ಜಿಗಳನ್ನು ಮಾರ್ಚ್ 1 ರಿಂದ ಮಾ.30ರ ವರೆಗೆ ತೋಟಗಾರಿಕೆ ಉಪನಿರ್ದೇಶಕರು(ಜಿ.ಪಂ)ಕೊಪ್ಪಳ, ಸಹಾಯಕ ತೋಟಗಾರಿಕೆ ನಿರ್ದೇಕರು (ರಾವ), ಕೊಪ್ಪಳ ರವರ ಕಛೇರಿಯಲ್ಲಿ ಪಡೆಯಬಹುದು ಅಥವಾ ಇಲಾಖಾ ವೆಬ್ ಸೈಟ್ www.horticulture.kar.nic.in ಮುಖಾಂತರ ಡನ್ ಲೋಡ್ ಮಾಡಿಕೊಳ್ಳಬಹುದು. ಅರ್ಜಿಗಳನ್ನು ಭರ್ತಿ ಮಾಡಿ ಏಪ್ರಿಲ್ 1ರ ಸಂಜೆ 5.30 ಗಂಟೆಯೊಳಗೆ ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ.)ಕೊಪ್ಪಳ ಅಥವಾ ಸಹಾಯಕ ತೋಟಗಾರಿಕೆ ನಿರ್ದೇಕರು (ರಾವ) ಕೊಪ್ಪಳ ರವರ ಕಛೇರಿಗೆ ಸಲ್ಲಿಸಬೇಕು. ಏ. 8 ರಂದು ಬೆಳಿಗ್ಗೆ 10 ಗಂಟೆಗೆ ತೋಟಗಾರಿಕೆ ಉಪನಿರ್ದೇಶಕರ ಕಛೇರಿಯಲ್ಲಿ ಸಂದರ್ಶನ ಏರ್ಪಡಿಸಲಾಗಿದ್ದು, ಈ ಸಂದರ್ಶನಕ್ಕೆ ಎಲ್ಲಾ ಮೂಲ ದಾಖಾಲಾತಿಗಳೊಂದಿಗೆ ಹಾಜರಾಗಬೇಕು. ಇದಕ್ಕಾಗಿ ಪ್ರತ್ಯೇಕ ಸಂದರ್ಶನ ಪತ್ರವನ್ನು ಕಳುಹಿಸಲಾಗುವುದಿಲ್ಲ ಎಂದು ತೋಟಗಾರಿಕೆ ಉಪ ನಿರ್ದೇಶರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅತಿಕ್ರಮಣ ಕಟ್ಟಡವನ್ನು ತೇರವುಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ



**ಅಥಣಿ**ಅಥಣಿಪುರಸಭೆಯವ್ಯಾಪ್ತಿಯಲ್ಲಿರುವ ಡಾ.ಬಾಬು ಜಗಜೀವನರಾಮ ಚರ್ಮೋದ್ಯೋಗ ಕೈಗಾರಿಕಾ ಅಭಿವೃದ್ಧಿನಿಗಮದಿಂದ ಮಂಜೂರಾದ 8 ಎಕರೆ ಜಮಿನಿನಲ್ಲಿ ಅನಧಿಕೃತವಾಗಿ ಅತಿಕ್ರಮಣ ಮಾಡಿಕೊಂಡು ಶೌಚಾಲಯ ನಿರ್ಮಾಣ ಮಾಡಿಕೊಳ್ಳುತ್ತಿದ್ದು, ತಕ್ಷಣ ಅನಧಿಕೃತ ಕಟ್ಟಡ ತೇರವುಗೊಳಿಸುವಂತೆ ಹರಳಯ್ಯಾ ಸಮಾಜದ ಮುಖಂಡ ಅನೀಲ ಸೌದಾಗರ ಅಥಣಿ ಪುರಸಭೆಯ ಮುಖ್ಯ ಅಧಿಕಾರಿಗಳನ್ನು ಒತ್ತಾಯಿಸಿದರು.

ಲಿಡ್ಕರ್ ನಿಗಮದ ಆಸ್ತಿ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುವ ಮೂಲಕ ಸಮಂಜಸವಾಗಿ ಉತ್ತರಿಸದಿದ್ದಾಗ ಪುರಸಭೆ ಮುಖ್ಯಾಧಿಕಾರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಹರಳಯ್ಯ ಸಮಾಜದ ಮುಖಂಡರು ಪುರಸಭೆ ವ್ಯಾಪ್ತಿಯಲ್ಲಿರುವ ಈ ಅತಿಕ್ರಮಣ ಕಟ್ಟಡವನ್ನು ತೆರವುಗೊಳಿಸುವಂತೆ ಪಟ್ಟು ಹಿಡಿದು ಪುರಸಭೆ ಮುಂದೆ ಪ್ರತಿಭಟನೆ ನಡೆಸಿದರು.

ಈ ವೇಳೆ ಹರಳಯ್ಯ ಸಮಾಜದ ಹಿರಿಯ ಮುಖಂಡ ಡಾ. ಅನೀಲ ಸೌದಾಗರ ಮಾತನಾಡಿ ಅನಧಿಕೃತವಾಗಿ ನಿರ್ಮಾಣ ಮಾಡುತ್ತಿರುವ ಕಟ್ಟಡ ತೇರವುಗೊಳಿಸಲು ಪುರಸಭೆ ಮುಖ್ಯಾಧಿಕಾರಿ ಅಶೋಕ ಗುಡಿಮನಿ ಅವರು ಅತಿಕ್ರಮಣ ತೇರವುಗಳಿಸಲು ಮೀನಾಮೆಷ ಎಣಿಸುತ್ತಿದ್ದಾರೆ.

ಅವರು ಮೌನ ವಹಿಸುತ್ತಿರುವುದನ್ನು ನೋಡಿದರೆ ಈ ಅತಿಕ್ರಮ ಕಟ್ಟಡ ನಿರ್ಮಾಣದಲ್ಲಿ ಭ್ರಷ್ಟಾಚಾರ ನಡೆದಿರುವ ಸಂದೇಹ ವ್ಯಕ್ತವಾಗುತ್ತಿದೆ ಎಂದು ಪುರಸಭೆಯ ಅಧಿಕಾರಿಯ ಮೇಲೆ ಗಂಭೀರ ಆರೋಪ ಮಾಡಿದ ಅವರು ಅಕ್ರಮ ಕಟ್ಟಡವನ್ನು ತೆರವುಗೊಳಿಸುವವರಿಗೆ ಪ್ರತಿಭಟನೆಯನ್ನು ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು. ಆಗ ಅಥಣಿ ಪಿಎ ಗಿರಿಮಲ್ಲಪ ಉಪ್ಪಾರ ಅವರು ಮದ್ಯಸ್ಥಿಕೆ ವಹಿಸಿ ಅತಿಕ್ರಮಣ ಸ್ಥಳಕ್ಕೆ ತೆರಳಿ ಪರಿಸ್ಥಿತಿ ತಿಳಿಗೊಳಿಸಿದರು. ಒಂದೆರಡು ದಿನಗಳಲ್ಲಿ ಈ ಕಟ್ಟಡವನ್ನು ತೆರವುಗೊಳಿಸುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಈ ಸಂದರ್ಭದಲ್ಲಿ ಹರಳಯ್ಯಾ ಸಮಾಜದ ಮುಖಂಡರಾದ ದೀಲಿಪ ಕಾಂಬಳೆ, ನಾರಾಯಣ ಹೊಣಕಾಂಡೆ, ಶಿವಾನಂದ ಸೌದಾಗರ, ಸದಾ ಸಿಕರೆ, ಗಜಾನನ ಮರಾಠ, ರಾಘು ಸನ್ನಕ್ಕಿ, ಸಂದೀಪ ಯಳಮಲ್ಲೆ, ವಿಠಲ ಕಾಂಬಳೆ, ಅಶೋಕ ಕಾಂಬಳೆ, ಮಂಜು ಹೋಳಿಕಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪುಸ್ತಕ ಖರೀದಿಗೆ ಅರ್ಜಿ ಆಹ್ವಾನ

**ಕೊಪ್ಪಳ :** ಕಲ್ಯಾಣ ಕರ್ನಾಟಕ ಭಾಗದ ಲೇಖಕರಿಗೆ ಉತ್ತೇಜನ ನೀಡಲು ಹಾಗೂ ಈ ಭಾಗದ ಲೇಖಕರು ಬರೆದ ಪುಸ್ತಕಗಳನ್ನು ಪರಿಚಯಿಸುವ ಪ್ರಮುಖ ಉದ್ದೇಶದ ಹಿನ್ನಲೆಯಲ್ಲಿ ಹಾಗೂ ಕಲ್ಯಾಣ ಕರ್ನಾಟಕ ಭಾಗದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿರುವ ಸಾರ್ವಜನಿಕರಿಗೆ ಓದುವ ಉತ್ತೇಜನ ನೀಡಲು ಕೆ.ಕೆ. ಆರ್.ಡಿ.ಬಿ. ಕಲಬುರಗಿ ಮ್ಯಾಕ್ರೋ ಯೋಜನೆಯಡಿ ಸ್ಥಳೀಯ ಲೇಖಕರಿಂದ 2018-19ನೇ ಸಾಲಿನ ಜನೇವರಿ-2018 ರಿಂದ 2023-24 ನೇ ಸಾಲಿನ ಡಿಸೆಂಬರ-2023 ರವರೆಗೆ ಪ್ರಥಮವಾಗಿ ಮುದ್ರಣಗೊಂಡು ಸಾಹಿತ್ಯ/ಲಲಿತಕಲೆ/ವಿಜ್ಞಾನ/ ಮಾನವಿಕ/ವೈದ್ಯಕೀಯ/ತಾಂತ್ರಿಕ/ಸ್ಪರ್ಧಾತ್ಮಕ/ಪರಾಮಾರ್ಶನ ಕೃತಿಗಳು ಹಾಗೂ ಮಕ್ಕಳ ಸಾಹಿತ್ಯ/ನವಸಾಕ್ಷರರ ಕೃತಿಗಳು ಇತ್ಯಾದಿ ವಿಷಯಗಳ ಕನ್ನಡ/ಆಂಗ್ಲ/ಇತರೆ ಭಾರತೀಯ ಭಾಷೆಯ ಗ್ರಂಥಗಳ ಆಯ್ಕೆಗೆ ಲೇಖಕರು, ಲೇಖಕ ಪ್ರಕಾಶಕರು, ಪ್ರಕಟಣಾ ಸಂಸ್ಥೆಗಳು ವಿತರಕರಿಂದ ಪುಸ್ತಕಗಳನ್ನು ಅಹ್ವಾನಿಸಿದೆ.

ಸದರಿ ಪುಸ್ತಕಗಳ ಖರೀದಿಗಾಗಿ, ಮುಖ್ಯ ಗ್ರಂಥಾಲಯಾಧಿಕಾರಿ ಕಛೇರಿಯಲ್ಲಿ ಅರ್ಜಿ ಪಡೆದು ದಿನಾಂಕ 11.03.2025 ರ ಸಂಜೆ 5 ಘಂಟೆಯ ಒಳಗಾಗಿ ಮುಖ್ಯ ಗ್ರಂಥಾಲಯಾಧಿಕಾರಿ ಕಛೇರಿ ಡಾ ಬಿ.ಆರ್ ಅಂಬೇಡ್ಕರ್ ರೀಡಿಂಗ್ ಸೆಂಟರ್ ಎನ್.ಜಿ.ಓ ಕಾಲೋನಿ

ಕಿನ್ನಾಳ ರಸ್ತೆ ಕೊಪ್ಪಳ ಇಲ್ಲಿಗೆ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿ, ಕಾಪಿರೈಟಿನ ನೊಂದಣಿಯ ದೃಡೀಕರಿಸಿದ ನಕಲು ಪ್ರತಿ, ವಿತರಕರು ಸರಬರಾಜು ಹಕ್ಕನ್ನು ಪಡೆದಿದ್ದಲ್ಲಿ ಅದರ ನಕಲು ಪ್ರತಿಯನ್ನು ಈ ದಾಖಲೆಗಳನ್ನು ಕಡ್ಡಾಯವಾಗಿ ಲಗತ್ತಿಸಿ ಸಲ್ಲಿಸಲು ಮುಖ್ಯ ಗ್ರಂಥಾಲಯಾಧಿಕಾರಿ ಜಿಲ್ಲಾ ಕೇಂದ್ರ ಗ್ರಂಥಾಲಯ ಕೊಪ್ಪಳ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸರ್ಕಾರಿ ವೈದ್ಯಕೀಯ ಕಾಲೇಜು ಆದಷ್ಟು ಬೇಗ ಕಾರ್ಯಾರಂಭ ಆಗಲಿ: ಎಸ್.ಐ.ಓ (SIO)



**ಬಾಗಲಕೋಟೆ :** ನಿನ್ನೆ ದಿನ ರಾಜ್ಯದ ಮುಖ್ಯಮಂತ್ರಿ ಸನ್ಮಾನ್ಯ ಸಿದ್ದರಾಮಯ್ಯ ನವರು 2025-26ರ ಸಾಲಿಗೆ ರಾಜ್ಯ ಬಜೆಟ್ ಅನ್ನು ಮಂಡಿಸಿದ್ದು, ಬಾಗಲಕೋಟೆ ಜಿಲ್ಲೆಯ ಜನರ ಬಹುದಿನದ ಕನಸಾಗಿದ್ದ ಸರ್ಕಾರಿ ಮೆಡಿಕಲ್ ಕಾಲೇಜು ಆರಂಭಕ್ಕೆ ಈ ಬಾರಿಯ ಬಜೆಟ್ ನಲ್ಲಿ "ಬಾಗಲಕೋಟೆಯಲ್ಲಿ ರಾಜೀವ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಘಟಕ ವೈದ್ಯಕೀಯ ಕಾಲೇಜನ್ನು ಆರಂಭಿಸಲು ಉದ್ದೇಶಿಸಲಾಗಿದೆ" ಎಂದು ಉಲ್ಲೇಖಿಸಲಾಗಿದೆ, ಈ ಸಕಾರಾತ್ಮಕ ಬೆಳವಣಿಗೆಯನ್ನು ಎಸ್.ಐ.ಓ ಬಾಗಲಕೋಟೆ ಜಿಲ್ಲೆಯು ಸ್ವಾಗತಿಸುತ್ತದೆ.

ಇದರೊಂದಿಗೆ 2014-15ರ ಬಜೆಟ್ ನಲ್ಲಿ ಘೋಷಣೆಯಾಗಿ ಕಾರ್ಯಾರಂಭ ಆಗದೆ ನೆನೆಗುದಿಗೆ ಬಿದ್ದಿದ್ದ ಸರ್ಕಾರಿ ಮೆಡಿಕಲ್ ಕಾಲೇಜಿನ ಕನಸು ಮತ್ತೆ ಚಿಗುರೊಡೆದಿದೆ, ವಿವಿಧ ಕನ್ನಡಪರ ಮತ್ತು ಜಾಗೃತ ನಾಗರಿಕರ, ವಿದ್ಯಾರ್ಥಿ ಮುಖಂಡರ ದಶಕಗಳ ಹೋರಾಟಕ್ಕೆ ಇದೀಗ ಪ್ರಾಥಮಿಕ ಜಯ ಸಿಕ್ಕಿದ್ದು, ಈ ಹೋರಾಟದಲ್ಲಿ ಮುಂದಾಳತ್ವ ವಹಿಸಿದ್ದ ಕರವೇ ಮುಖಂಡರು ಮತ್ತು ಕಾರ್ಯಕರ್ತರಿಗೆ ಹಾಗೂ ವಿದ್ಯಾರ್ಥಿ ಮುಖಂಡರಿಗೆ, ನಾಗರಿಕರಿಗೆ ಶುಭಾಶಯಗಳನ್ನು ತಿಳಿಸುತ್ತೇನೆ.

ಕಾಲೇಜು ಆರಂಭಕ್ಕೆ ಅಗತ್ಯ ಅನುದಾನದ ನೆರವನ್ನು ಸಹ ಖಾತರಿಪಡಿಸಬೇಕೆಂದು ಸರ್ಕಾರ-ಕ್ಕೆ ಒತ್ತಾಯಿಸುತ್ತೇವೆ, ಅನುದಾನವನ್ನು ಶೀಘ್ರದಲ್ಲೇ ಬಿಡುಗಡೆಗೊಳಿಸಿ ಈ ಮಹತ್ವಾಕಾಂಕ್ಷಿ ಕಾರ್ಯವನ್ನು ತ್ವರಿತವಾಗಿ ಕಾರ್ಯರೂಪಕ್ಕೆ ತರಲು ಸರ್ಕಾರ ಮಟ್ಟದಲ್ಲಿ ಜಿಲ್ಲೆಯ ಜನಪ್ರತಿನಿಧಿಗಳು ನಿರಂತರ ಪ್ರಾಮಾಣಿಕ ಪ್ರಯತ್ನ ಮಾಡುವ ಮೂಲಕ ಜನತೆಯ ಬೇಡಿಕೆಯನ್ನು ಸಾಕಾರ ಗೊಳಿಸಬೇಕಾಗಿದೆ ಎಂದು ಖ,ಖ,ಔ,ಜಿಲ್ಲಾ ಘಟಕದ ಅಧ್ಯಕ್ಷರಾದ ಮೊಹಮ್ಮದ್ ಪೀರ್ ಲಟಗೇರಿ ಪತ್ರಿಕಾ ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.

# ಧರ್ಮಸ್ಥಳ ಯೋಜನೆಯಿಂದ ಸಮಾಜಮುಖಿ ಕಾರ್ಯ



**ಗುಳೇದಗುಡ್ಡ :** ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆ ವತಿಯಿಂದ ಹಾನಾಪೂರ ಎಸ್.ಪಿ. ಗ್ರಾಮದ ವಾಗ್ದೇಯಿದೇವಿ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಧರ್ಮಸ್ಥಳದ ಧರ್ಮಧಿಕಾರಿಗಳಾದ ಪೂಜ್ಯ ಡಾ.ಡಿ. ವೀರೇಂದ್ರ ಹೆಗ್ಗಡೆಯವರು ರೂ.2,00,000 ದೇಣಿಗೆ ನೀಡಿದ್ದಾರೆ.

ಬಾಗಲಕೋಟ ಜಿಲ್ಲಾ ನಿರ್ದೇಶಕ ಚನ್ನಕೇಶವ ಅವರು ದೇವಸ್ಥಾನಕ್ಕೆ ಚೆಕ್ ಹಸ್ತಾಂತರಿಸಿ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ತಾಲೂಕಿನಲ್ಲಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ವ್ಯಕ್ತಿಯ ವ್ಯಕ್ತಿತ್ವಬದಲಾವಣೆ,ಕುಟುಂಬ ಸುಧಾರಣೆ,ಗ್ರಾಮಗಳ ಅಭಿವೃದ್ಧಿಯ ಉದ್ದೇಶದಿಂದ ಕಾರ್ಯಕ್ರಮಗಳ ಅನುಷ್ಠಾನ ಮಾಡುತ್ತಿದೆ. ದೇವಸ್ಥಾನ ಮತ್ತು ಸಮುದಾಯ ಭವನಗಳ ನಿರ್ಮಾಣಕ್ಕೆ ಅನುದಾನ, ವೃತ್ತಿ ಶಿಕ್ಷಣ ಪಡೆಯುವ ಮಕ್ಕಳಿಗೆ ಶಿಷ್ಯ ವೇತನ ಹೀಗೆ ಹಲವು ಕಾರ್ಯ ಯೋಜನೆ ರೂಪಿಸಿದ್ದಾರೆ. ಇಲ್ಲಿಯವರೆಗೆ ಬಾದಾಮಿ ತಾಲೂಕಿನಲ್ಲಿ 5 ಕೆರೆಗಳ ಅಭಿವೃದ್ಧಿ ಪಡಿಸಲಾಗಿದೆ. ಆ ಮೂಲಕ ಜನ ಜಾನುವಾರುಗಳ ನೀರಿನ ಸಮಸ್ಯೆಗೆ ಪರಿಹಾರ ಕೊಡುವ ಕೆಲಸ ಮಾಡಲಾಗುತ್ತಿದೆ ಎಂದರು.

ಮುಖಂಡರಾದ ಗೋಪಾಲ್ ಭಟ್ಟಡ ಮಾತನಾಡಿ, ಪೂಜ್ಯರಕಾರ್ಯಕ್ರಮನಮ್ಮೆಲ್ಲರಿಗೆಮಾದರಿಯಾಗಿದೆ. ಪ್ರತಿಯೊಬ್ಬರೂ ಧರ್ಮಸ್ಥಳ ಯೋಜನೆಗಳ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ಹಲ್ಲಪ್ಪ ಚವಾಣ್, ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಅಶೋಕನಾಯಿನೆಗಲಿ,ತಾಲೂಕುಯೋಜನಾಧಿಕಾರಿ ಮಹಾಂತೇಶ್, ಮುಖಂಡರಾದ ಗಣೇಶ ನಾಯಕ, ಕೆ.ಪಿ.ರಾಠೋಡ್, ಆರ್.ಕೆ.ಪಮ್ಮಾರ, ವಲಯದ ಮೇಲ್ವಿಚಾರಕ ಮಲ್ಲಿಕಾರ್ಜುನ, ಸೇವಾಪ್ರತಿನಿಧಿ ಪುಷ್ಪ ಇತರರು ಇದ್ದರು.

# ಮಕ್ಕಳೇ ಈ ದೇಶದ ಸಂಪತ್ತು: ಭಾಗ್ಯಾಶ್ರೀ ಪಾಟೀಲ



**ಕೊಲ್ಹಾರ :** ಮಕ್ಕಳೇ ಈ ದೇಶದ ಸಂಪತ್ತು. ಮಕ್ಕಳಿಗೆ ಈ ದೇಶದ ಹಣೆಬರಹ ವನ್ನು ಬದಲಿಸುವ ಶಕ್ತಿಯಿದೆ ಎಂದು ಸಚಿವ ಶಿವಾನಂದ ಪಾಟೀಲರ ಧರ್ಮಪತ್ನಿ ಭಾಗ್ಯಾಶ್ರೀ ಪಾಟೀಲ ಹೇಳಿದರು.

ತಾಲ್ಲೂಕಿನ ಮಟ್ಟಿಹಾಳದಲ್ಲಿ ಭಾನುವಾರ ಜರುಗಿದ ಸದ್ಗುರು ಸದಾನಂದ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ,ಮಾತೃ ಸಂಗಮ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಮಕ್ಕಳಿಗೆ ಪಾಲಕರು ಆಸ್ತಿಯನ್ನುಕಡಿಮೆಮಾಡಿದರೂಪರವಾಗಿಲ್ಲ ಆದರೆ ಅವರಿಗೆ ಒಳ್ಳೆಯ ವಿದ್ಯೆಯನ್ನು ಕೊಡಿಸುವ ಕೆಲಸವನ್ನು ಮಾಡಬೇಕು. ಇವತ್ತು ಈ ಶಾಲೆಯಲ್ಲಿ ಕಲಿತ ಅನೇಕ ಮಕ್ಕಳು ಸೈನಿಕ,ನವೋದಯ,ಮುರಾರ್ಜಿ ವಸತಿ ಶಾಲೆಗಳಿಗೆ ಆಯ್ಕೆಯಾಗಿದ್ದು ಬಹಳ ಹೆಮ್ಮೆ ಎನಿಸಿದೆ.ಜ್ಞಾನಕ್ಕಿರುವ ಶಕ್ತಿ ಈ ಜಗತ್ತಿನಲ್ಲಿ ಬೇರೆ ಯಾವುದಕ್ಕೂ ಇಲ್ಲ .ಈ ಶಾಲೆ ಜಿಲ್ಲೆಯಲ್ಲಿ ಹೆಸರುವಾಸಿಯಾಗಲಿ ಬರುವ ದಿನಗಳಲ್ಲಿ ಸರ್ಕಾರದ ವತಿಯಿಂದ ಸೌಲಭ್ಯಗಳನ್ನು ಕಲ್ಪಸಿಕೊಡಲಾಗುವುದು. ಬಸವನ ಬಾಗೇವಾಡಿ ಕ್ಷೇತ್ರ ಎಲ್ಲ ರೀತಿಯಲ್ಲಿ ಅಭಿವೃದ್ಧಿಯನ್ನು ಹೊಂದಿದೆ ಆದರೆ ಶೈಕ್ಷಣಿಕವಾಗಿ ಇನ್ನುಷ್ಟು ಅಭಿವೃದ್ಧಿಯನ್ನು ಹೊಂದಬೇಕ್ಕೆನ್ನುವ ಆಸೆ ಸಚಿವ ಶಿವಾನಂದ ಪಾಟೀರಿಗೆ ಇದೆ.ಕ್ಷೇತ್ರದಲ್ಲಿ ದೇವಸ್ಥಾನದ ಗಂಟೆಗಳು ಹೇಗೆ ಹೆಚ್ಚಿಗೆ ಕೇಳಿಸುತ್ತವೆಯೋ ಹಾಗೆಯೇ ಶಾಲೆಯಲ್ಲಿ ಗಂಟೆಗಳು ಹೆಚ್ಚಿಗೆ ಕೇಳಿಸಬೇಕೆನ್ನುವ ಆಸೆ ಸಚಿವರಿಗಿದೆ. ಕಾರಣ ಬರುವ ದಿನಗಳಲ್ಲಿ ಶೈಕ್ಷಣಿಕ ಕ್ಷೇತ್ರಕ್ಕೆ ಹಚ್ಚು ಒತ್ತು ನೀಡಲಾಗುವುದು ಎಂದರು. ಗೌರವ ಉಪಸ್ಥಿತಿ ಸ್ಥಾನ ವಹಿಸಿ ಮಾಜಿ ಸಚಿವ ಎಸ್ ಕೆ ಬೆಳ್ಳುಬ್ಬಿ ಮಾತನಾಡಿ,ಈ ಜಗತ್ತಿನಲ್ಲಿ ವಿದ್ಯೆಗಿಂತ ದೊಡ್ಡ ಆಸ್ತಿ ಯಾವುದೂ ಇಲ್ಲ, ಕೂಲಿ ಮಾಡುವವನ ಮಗ ದೊಡ್ಡ ಅಧಿಕಾರಿ,ರಾಷ್ಟಪತಿ,ಪ್ರಧಾನ ಮಂತ್ರಿ ಆಗಬಹುದು.ವಿದ್ಯಾರ್ಥಿಗಳಕೈಯಲ್ಲಿಅವರ ಭವಿಷ್ಯವಿದೆ ಎಂಬುದನ್ನ ಈ ಶಾಲೆಯ ಮಕ್ಕಳು ವಸತಿ ಶಾಲೆಗಳಿಗೆ ಆಯ್ಕೆಯಾಗುವ ಮೂಲಕ ತೋರಿಸಿಕೊಟ್ಟಿದ್ದಾರೆ. ಇಲ್ಲಿ ಜಾತಿ ,ಧರ್ಮ ಬರುವುದಿಲ್ಲ ಇದು ಒಂದು ದೊಡ್ಡ ಸಾಧನೆ,ದೇವರು ಮೆಚ್ಚುವ ಕೆಲಸ ಹೀಗಾಗಿ ನಾನು ಎಲ್ಲ ಮಕ್ಕಳಿಗೆ ಅಭಿನಂದನೆ ಸಲ್ಲಿಸುತ್ತೇನೆ.ಈ ದೇಶದಲ್ಲಿ ಹುಟ್ಟಿರುವಂತಹ ಪ್ರತಿಯೊಬ್ಬನಿಗೂ ಕೂಡಾ ರಾಷ್ಟ್ರ,ಧರ್ಮ,ಸಂಸ್ಕೃತಿಯ ಬಗ್ಗೆ ಗೊತ್ತಿರಬೇಕು ಅದು ಈ ಮಣ್ಣಿನ ಗುಣದಲ್ಲಿದೆ. ಪ್ರಯಾಗರಾಜ್ ನಲ್ಲಿ ಜರುಗಿದ ಮಹಾಕುಂಭಮೇಳ ಇದಕ್ಕೆ ಸಾಕ್ಷಿ ಎಂದರು. ಮಕ್ಕಳಿಗೆ ಶಿಕ್ಷಣದ ಜೊತೆಗೆ ಚಿತ್ರಕಲೆ,ಸಂಗೀತ,ನೃತ್ಯ ,ಭಾಷಣ,ಶಿಲ್ಪ ಕಲೆಯನ್ನು ಕಲಿಸಬೇಕು. ಅದರಿಂದ ಅವರು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆ ಎಂದರು. ಮುಖ್ಯ ಅತಿಥಿ ಸ್ಥಾನ ವಹಿಸಿ ಪಿ ಎಸ್ ಐ ಎಂ ಬಿ ಬಿರಾದಾರ ಮಾತನಾಡಿ, ಸದೃಡವಾದ ದೇಹದಲ್ಲಿ ಸದೃಡವಾದಂತಹ ಮನಸ್ಸು ಇರುತ್ತದೆ.ವಿನಯವಿಲ್ಲದ ವಿದ್ಯೆ ವ್ಯರ್ಥ, ಗುಣವಿಲ್ಲದ ರೂಪ ವ್ಯರ್ಥಎಂಬಂತೆ ಒಬ್ಬ ವ್ಯಕ್ತಿಯನ್ನು ವ್ಯಕ್ತಿತ್ವದಿಂದ ಗುರುತಿಸಬೇಕು ವಿನಹ ಐಶ್ವರ್ಯದಿಂದಲ್ಲ. ಮಕ್ಕಳು ಚಿಕ್ಕವರಿದ್ದಾಗ ತಂದೆ ತಾಯಿಗಳು ಒಳ್ಳೆಯ ಸಂಸ್ಕಾರವನ್ನು ಕಲಿಸಬೇಕು.ಮಕ್ಕಳಲ್ಲಿ ಮಹಾತ್ವಾಕಾಂಕ್ಷೆಯನ್ನು ಬೆಳಿಸಬೇಕು. ಮಕ್ಕಳಿಗೆ ಸಂಗೀತವನ್ನು ಕಲಿಸಿ.ಸಂಗೀತ ಕಲಿತ ವ್ಯಕ್ತಿ ಯಾವುದೇ ಅಪರಾಧ ಕೃತ್ಯಗಳಲ್ಲಿ ತೊಡಗುವುದಿಲ್ಲ .ಮಗುವಿಗೆ ರಾಮಾಯಣ ,ಮಹಾಭಾರತ,ಕಾನೂನಿನ ಬಗ್ಗೆ ಅಧ್ಯಯನ ಮಾಡಿಸಿ .ಅರಿವು ಮೂಡಿಸಿ ಇದರಿಂದ ಮಗು ದೊಡ್ಡ ವ್ಯಕ್ತಿಯಾಗಿ ಸಮಾಜದಲ್ಲಿ ಬೆಳೆಯುತ್ತಾನೆ. ಶಾಲೆಯಲ್ಲಿ ಪಠ್ಯಕ್ರಮ ಬೋಧಿಸಿದರೆ ಮನೆಯಲ್ಲಿ ತಾಯಿ ತಿದ್ದಿ ತಿಡುವ ಕೆಲಸ ಮಾಡಬೇಕು.ನಮ್ಮ ದೇಶದಲ್ಲಿ ಹಲವು ಭಾಷೆ ,ಪಂಥವಿದ್ದರೂ ನಾವು ಮೊದಲು ದೇಶ ಭಕ್ತರಾಗಬೇಕು ಎಂದು ಭಗತ್ ಸಿಂಗ್ ರವರ ಜೀವನದ ಬಗ್ಗೆ ತಿಳಿಸಿದರು. ದಿವ್ಯ ಸಾನಿಧ್ಯ ವಹಿಸಿ ಷ ಮ ಪೂ ಧರ್ಮರತ್ನ ಡಾ ಕೈಲಾಸನಾಥ ಮಹಾಸ್ವಾಮಿಗಳು ಆಶೀರ್ವಚನ ನೀಡುತ್ತಾ ಮಾತನಾಡಿ, ಅನೇಕ ಕಷ್ಟ ಕಾರ್ಪಣ್ಯೆಗಳನ್ನು ಅನುಭವಿಸಿ ಈ ಶಿಕ್ಷಣ ಸಂಸ್ಥೆ ಸಸಿಯಾಗಿ ಹುಟ್ಟಿ ಇಂದು ಹೆಮ್ಮರವಾಗಿ ಬೆಳೆದಿದೆ.ಈ ಶಿಕ್ಷಣ ಸಂಸ್ಥೆ ಮುಂಬರುವ ದಿನಗಳಲ್ಲಿ ರಾಷ್ಟ್ರ ಮಟ್ಟಕ್ಕೆ ಬೆಳೆದು ಹೆಸರುವಾಸಿಯಾಗಲಿ ಎಂದುಶುಭಹಾರೈಸಿದರು.ಸಮಾರಂಭದಲ್ಲಿ ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಸನ್ಮಾನಿಸಿಲಾಯಿತು. ಸದ್ಗುರು ಸದಾನಂದ ಭಾವಚಿತ್ರಕ್ಕೆ ಗ್ರಾ ಪಂ ಅಧ್ಯಕ್ಷ ತೇಜಾ ಕುಬಕಡ್ಡಿ ಹಾಗೂ ಗಣ್ಯರು ಪುಷ್ಪಾರ್ಚನೆ ಸಲ್ಲಿಸಿದರು. ಮುಖ್ಯ ಅತಿಥಿಗಳಾಗಿ ತಾನಾಜಿ ನಾಗರಾಳ, ನಿಂಗನಗೌಡ ಪಾಟೀಲ,ಹಣಮಂತಗೌಡ ಕುಬಕಡ್ಡಿ,ಸಿ ಪಿ ಪಾಟೀಲ,ಎಸ್ ಎಸ್ ಗರಸಂಗಿ,ಸುರೇಶ ಬಿರಾದಾರ,ಸಂತೋಷ ಚನಗೊಂಡ,ಜಗದೀಶ ಸಾಲಳ್ಳಿ, ಮಲ್ಲಿಕಾರ್ಜುನಕುಬಕಡ್ಡಿ,ಮುತ್ತುಸಾಹುಕಾರ ಹಳ್ಳೂರ,ಸಂಗು ಮಾಳೇದ, ಸಗರಪ್ಪ ಮುರನಾಳ, ನಂದು ಗಡಗಿ,ನಿಂಗಪ್ಪ ಪೂಜಾರಿ,ಶ್ರೀಕಾಂತ ಗಣಿ, ಶಿವಕುಮಾರ ಪತ್ತಾರ,ಹಣಮಂತ ಬಿರಾದಾರ, ಸಂಸ್ಥೆಯ ಕಾರ್ಯದರ್ಶಿ ಮಲ್ಲಿಕಾರ್ಜುನ ರುದ್ರಗಣಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಮಕ್ಕಳು ಸತ್ಪ್ರಜೆಗಳಾಗಿ ಬೆಳೆಯಲು ಬಾಲ್ಯದಿಂದಲೇ ಶಿಕ್ಷಣ ನೀಡಿ: ಮಂಗಾನವರ



**ವಿಜಯಪುರ:**ಇಂದಿನ ಮಕ್ಕಳು ನಾಳಿನ ಭವ್ಯ ಭಾರತದ ನಾಗರಿಕರು. ಪಾಲಕರು ಹಾಗೂ ಶಿಕ್ಷಕರು ಅವರಿಗೆ ಬಾಲ್ಯದಿಂದಲೇ ಶಿಕ್ಷಣದ ಜೊತೆಗೆ ಮೌಲ್ಯಯುತ ಜೀವನದ ಮಹತ್ವ, ಸಂಸ್ಕಾರ ಕಲಿಸಬೇಕೆಂದು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಶಿವಾನಂದ ಮಂಗಾನವರ ಹೇಳಿದರು.

ಜಿಲ್ಲೆಯ ನಿಡಗುಂದಿ ತಾಲೂಕಿನ ಮುಕರ್ತಿಹಾಳ ಗ್ರಾಮದ ಮಾತೋಶ್ರೀ ಶಕುಂತಲಾಬಾಯಿ ಬೆಳ್ಳಿ ಪಬ್ಲಿಕ್ ಶಾಲೆಯಲ್ಲಿ ಭಾನುವಾರ ಜರುಗಿದ 8ನೇಯ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಆದರ್ಶ ಶಿಕ್ಷಕ, ಖ್ಯಾತ ಸಾಹಿತಿ ಡಾ. ಅಶೋಕ ಹಂಚಲಿ ಉಪನ್ಯಾಸ ನೀಡಿ ಮಾತನಾಡಿ, ಮಗುವಿಗೆ ಬಾಲ್ಯದಿಂದಲೇ ಸುಂದರವಾದ ಪರಿಸರದಲ್ಲಿ ಶಿಕ್ಷಣ ನೀಡಿದರೆ, ಆತ ದೇಶ ಮೆಚ್ಚುವ ಒಬ್ಬ ವಿಜ್ಞಾನಿಯನ್ನಾಗಿ, ಒಳ್ಳೆಯ ಸಮಾಜ ನಿರ್ಮಿಸುವ ಜವಾಬ್ದಾರಿಯುತ ನಾಗರಿಕರಾಗುತ್ತಾರೆ. ಪಾಲಕರು ಮಕ್ಕಳಿಗೆ ಮೊಬೈಲ್ ಬದಲಾಗಿ ಪುಸ್ತಕ ಓದಿಸುವ ಹವ್ಯಾಸ ಬೆಳೆಸಬೇಕು. ಕೃಷಿಯ ಉತ್ತಮ ಪರಿಸರದಲ್ಲಿ ನಿರ್ಮಿಸಿದ ಈ ಶಾಲೆ ಮುಂದೊಂದು ದಿನ ಇಲ್ಲಿ ಕಲಿತ ವಿದ್ಯಾರ್ಥಿಗಳು ಶ್ರೇಷ್ಠ ಕೃಷಿ ತಜ್ಞರಾಗಿ, ಶ್ರೇಷ್ಠ ರೈತರಾಗಿ ನಾಡಿನ ಸೇವೆಗೈಯುವದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಶಾಲೆಯ ಅಧ್ಯಕ್ಷ ಡಾ. ರವೀಂದ್ರ ಬೆಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಮಕ್ಕಳು ಕನ್ನಡ ಭಾಷೆಯ ಜೊತೆಗೆ ಅಂಗ್ಲ ಭಾಷೆಯಲ್ಲಿ ಕಲಿಯಲು ಅನುಕೂಲವಾಗುವಂತೆ ಶಾಲೆ ಆರಂಭಿಸಲಾಗಿದ್ದು, ಸುತ್ತಲಿನ ಏಳು ಗ್ರಾಮಗಳಿಂದ ಮಕ್ಕಳು ಆಗಮಿಸಿ ಉತ್ತಮ ಶಿಕ್ಷಣ ಕಲಿಯುತ್ತಿದ್ದಾರೆ. ಇದಕ್ಕಾಗಿ ಇಲ್ಲಿ ಉತ್ತಮ ಕೃಷಿ ಪರಿಸರ, ವಾತಾವರಣ ಕಲ್ಪಿಸಲಾಗಿದೆ ಎಂದರು.

ಯುಕೆಜಿ ಮುಗಿಸಿದ ಚಿಣ್ಣರಿಗೆ ಒಂದನೇ ತರಗತಿಗೆ ಪದನ್ನೋತಿ ಸಮಾರಂಭ ಜರುಗಿತು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ, ವಿಜೇತರಾದ ಮಕ್ಕಳಿಗೆ ಪಾರಿತೋಷಕ ವಿತರಣೆ ಗಣ್ಯರಿಂದ ಜರುಗಿತು.

ಕಾರ್ಯಕ್ರಮವನ್ನು ಗೋಕಾಕಿನ ಶೈಲಾ ಕೋಕರಿ ನಿರೂಪಿಸಿದರು. ವೇದಿಕೆಯಲ್ಲಿ ಕೆ. ಎಲ್. ದಶವಂತ, ವಿಜಯಕುಮಾರ ಸಿ, ಮಾಳಪ್ಪ ಪೂಜಾರಿ, ದಿಲೀಪ ಲಮಾಣಿ, ಶರಣಪ್ಪ ಚಿಮ್ಮಲಗಿ, ಮುಖ್ಯ ಗುರುಮಾತೆ, ವಿದ್ಯಾ ನರಸರಡ್ಡಿ ಉಪಸ್ಥಿತರಿದ್ದರು.

ಶಿಕ್ಷಕಿಯರಾದ ಕೀರ್ತಿ ಚಿಮ್ಮಲಗಿ, ಅಕ್ಷತಾ ಮಾಳಗೊಂಡ, ಪ್ರತಿಭಾ ಚಲವಾದಿ, ರೂಪಾ ಪಟ್ಟಣಶೆಟ್ಟಿ, ಸುಪ್ರಿಯಾ, ಶೈಲಾ ಕೋಕರೆ, ಕವಿತಾ, ರವಿ, ಈರಣ್ಣ ಮಣ್ಣೂರ, ಮಾಂತೇಶ, ಮಂಜು, ಬೀರಪ್ಪ, ಆರುಣ, ಅಣ್ಣರಾಯ, ಪಾಲಕರಾದ ಸುರೇಶ ಲಮಾಣಿ, ರವಿ ಲಮಾಣಿ, ಕಾಂತು ಲಮಾಣಿ ಸೇರಿದಂತೆ ಸುತ್ತಲಿನ ಗ್ರಾಮದ ಪಾಲಕರು, ಶಾಲಾ ಮಕ್ಕಳು ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪರೀಕ್ಷೆಯಲ್ಲಿ ಗೊಲ್ಡ ಮೆಡಲ್ ಮತ್ತು ರ್‍ಯಾಂಕ್



**ಬಾಗಲಕೋಟೆ :** ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ 2023-24ರ ಸಾಲಿನ ವಾರ್ಷಿಕ ಪರೀಕ್ಷೇಯಲ್ಲಿ ಹಾನಗಲ್ ಶ್ರೀ ಕುಮಾರೇಶ್ವರ ಔಷಧ ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಗೊಲ್ಡ ಮೆಡಲ್ ಮತ್ತು ರ್‍ಯಾಂಕ್‌ಗಳನ್ನು ತಂದಿದ್ದಾರೆ.

ಎಮ್.ಫಾರ್ಮಾ ಕೋರ್ಸ್ (ಪಾರ್ಮಾಕಾಲಜಿ) ವಿಭಾಗಕ್ಕೆ ಕು.ಅಶ್ವಿನಿ ಹೊಸುರ ಹಾಗೂ ಎಮ್.ಫಾರ್ಮಾ ಕೋರ್ಸ್ (ಪಾರ್ಮಾಸುಟಿಕ್ಸ್) ವಿಭಾಗಕ್ಕೆ ಕು.ಸಂಯುಕ್ತಾ ಬಿಲ್ ಗೊಲ್ಡ ಮೆಡಲ್ ಜೊತೆಗೆ ಕರ್ನಾಟಕಕ್ಕೆಪ್ರಥಮರ್‍ಯಾಂಕ್‌ಪಡೆದುಕೊಂಡಿರುತ್ತಾರೆ. ಎಮ್.ಫಾರ್ಮಾ ಕೋರ್ಸ್ (ಪಾರ್ಮಾಕಾಲಜಿ) ವಿಭಾಗದಲ್ಲಿ ಕು.ಸುಶ್ಮಾ ಕಾಗವಾಡೆ, ಕು. ಸವಿತಾ ಪಾಟಿಲ್ ಹಾಗೂ ಕು. ವಾಣಿ ಚೆಟ್ಟರ ಕ್ರಮವಾಗಿ 3,4 ಹಾಗೂ 5ನೇ ರ್‍ಯಾಂಕ್ ಪಡೆದುಕೊಂಡಿರುತ್ತಾರೆ. ಬಿ.ಫಾರ್ಮ 7ನೇ ಸೆಮಿಸ್ಟರನ ಕು. ಶ್ರೀದೇವಿ ಕುರಿ 3ನೇ ರ್‍ಯಾಂಕ್ ಹಾಗೂ ಫಾರ್ಮ.ಡಿ 4 ನೇ ವರ್ಷದ ಕು.ಚೈತನ್ಯಾ ಕುಪ್ಪಸ್ತ 10 ನೇ ರ್‍ಯಾಂಕ್ ಪಡೆದು ಕೊಂಡಿರುತ್ತಾರೆ. ವಿವಿಧ ವಿಭಾಗಗಳಲ್ಲಿ ನಮ್ಮ ಮಹಾವಿದ್ಯಾಯದ 173 ವಿದ್ಯಾರ್ಥಿಗಳು (ವಿಷಯಾಧರಿತ) ರ್‍ಯಾಂಕಗಳಲ್ಲಿ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿ ನಮ್ಮ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.

ಗೊಲ್ಡಮೆಡಲ್‌ಹಾಗೂರ್‍ಯಾಂಕ್‌ಪಡೆದವಿದ್ಯಾರ್ಥಿಗಳಿಗೆ ಬ.ವಿ.ವಿ.ಸಂಘದ ಕಾರ್ಯಾದ್ಯಕ್ಷರಾದ ಡಾ.ವೀರಣ್ಣ ಸಿ. ಚರಂತಿಮಠ, ಗೌರವ ಕಾರ್ಯದರ್ಶಿಗಳಾದ, ಮಹೇಶ ಎನ್. ಅಥಣಿ, ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಮಲ್ಲಿಕಾರ್ಜುನ ಎನ್. ಸಾಸನೂರ, ಪ್ರಾಚಾರ್ಯರಾದ ಡಾ.ವೈ. ಶ್ರೀನಿವಾಸ ಹಾಗೂ ಸಿಬ್ಬಂದಿ ವರ್ಗ ಮೆಚ್ಚುಗೆ ವ್ಯಕ್ತ ಪಡಿಸಿ, ಅಭಿನಂದಿಸಿದ್ದಾರೆ.

### ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ 111 ನೇ ಪುಟ್ಟರಾಜ ಗವಾಯಿಗಳ ಜಯಂತಿಯ ಆಚರಣೆ

# ಪುಟ್ಟರಾಜ ಗವಾಯಿಗಳು ಅಂಧರು, ಅನಾಥರು, ದೀನ ದಲಿತರಿಗೆ ಸಂಗೀತ ವಿದ್ಯ ಕಲಿಸಿ ಬದುಕು ನೀಡಿದ ಮಹಾಪುರುಷರು: ಡಾ.ಎಸ್.ಆರ್. ಮೂಗನೂರಮಠ




**ಬಾಗಲಕೋಟೆ :** ಅಂಧತ್ವವನ್ನು ಮೆಟ್ಟಿನಿಂತು ಅಸಾಧ್ಯವಾದುದನ್ನು ಸಾಧ್ಯವಾಗಿಸಿದವರು ಪುಟ್ಟರಾಜ ಕವಿ ಗವಾಯಿಗಳು, ಅಂಧರು, ಅನಾಥರು, ದೀನ ದಲಿತರಿಗೆ ಸಂಗೀತ ವಿದ್ಯ ಕಲಿಸಿ ಅವರಿಗೆ ಸ್ವತಂತ್ರವಾಗಿ ಬದುಕಲು ಕಲಿಸಿಕೊಟ್ಟ ಮಹಾಪುರುಷರು ಎಂದು ಬಸವೇಶ್ವರ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯಎಸ್.ಆರ್.ಮೂಗನೂರಮಠ ಹೇಳಿದರು.

ಅವರು ನಗರದ ಬಿ.ವಿ.ವಿ. ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ 111 ನೇ ಪುಟ್ಟರಾಜ ಗವಾಯಿಗಳ ಜಯಂತಿಯ ಆಚರಣೆಯನ್ನು ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸುವ ಮೂಲಕ ಗೌರವ ನಮನ ಸಲ್ಲಿಸಿ ಮಾತನಾಡಿದ ಅವರು ಗವಾಯಿಗಳ ವ್ಯಕಿತ್ವಅಸಾಧಾರಣವಾದದ್ದು, ಅವರು ಹಿಂದಿ ಭಾಷೆಯಲ್ಲಿ ರಚಿಸಿದ ಬಸವ ಪುರಾಣಕ್ಕೆಮಾಜಿ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರು ಪ್ರಭಾವಿತರಾಗಿ ಗವಾಯಿಗಳನ್ನು ನವದೇಹಲಿಗೆ ಕರೆಸಿ ಸನ್ಮಾನಿಸಿದ್ದರು ಎಂದು ನೆನೆಪಿಸಿದರು ಸಂಗೀತಕ್ಕಾಗಿ ರಾಜ್ಯದಲ್ಲಿ ಇರುವ ಶಾಲೆ ಅಂದ್ರೆ ಅದು ನಮ್ಮ ಗದಗ ಜಿಲ್ಲೆಯಲ್ಲಿರುವ ಪಂಚಾಕ್ಷರಿ ಗವಾಯಿಗಳ ಆಶ್ರಮ, ಇವರನ್ನು ತ್ರಿಭಾಷಾ ಕವಿ ಎಂದು ಕರೆಯುತ್ತಿದ್ದರು. ಇವರು ಮೂರು ಭಾಷೆಗಳಲ್ಲಿ ಗ್ರಂಥಗಳು, ಪುರಾಣಗಳು, ವಚನಗಳನ್ನು ರಚಿಸಿದ್ದಾರೆ, ಸಂಗೀತಕ್ಕೆ ಇರುವ ವಾದ್ಯಗಳು ಇವರ ಆಶ್ರಮದಲ್ಲಿ ನೋಡಬಹುದು. ಇವರಿಗೆ ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿ ಲಭಿಸಿವೆ.

ಇವರು ಸಮಾಜದ ಕಲ್ಯಾಣಕ್ಕೆ ಮತ್ತು ಅಂಧ ಮಕ್ಕಳ ಜೀವನಕ್ಕಾಗಿ ತಮ್ಮ ಜೀವನವನ್ನು ಮೂಡುಪಾಗಿ ಇಟ್ಟರು ಎಂದರು.

ಸಂಗೀತ ವಿಭಾಗದ ಮುಖ್ಯಸ್ಥರಾದ ಡಾ.ಕೆ.ವಿ.ಮಠ ಮಾತನಾಡಿ ಮಹಾನ್ ಸಂಗೀತ ಕಲಾವಿದರಿಗೆ ಹೊರ ಹೊಮ್ಮಿದ ಅನೇಕ ಸಂಗೀತಗಾರರು ಇವರ ಆಶ್ರಮದಲ್ಲಿ ಕಲಿತಿದ್ದಾರೆ ಎಂದು ಹೇಳಿದರು. ಶಾಸ್ತ್ರೀಯ ಸಂಗೀತ,

ಹಿಂದೂಸ್ತಾನಿ ಸಂಗೀತವನ್ನು ಇವರ ಆಶ್ರಮದಲ್ಲಿ ಕಲಿಯಬಹುದು. ನಮ್ಮ ಕಣ್ಣೆದುರಿಗೆಕಾಣುವಪವಾಡಪುರುಷರೆಂದರೆ ನಮ್ಮ ಪುಟ್ಟರಾಜ ಗವಾಯಿಗಳು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಡಾ. ಆರ್. ಎಂ. ಬೆನ್ನೂರ್, ಶ್ರೇಯಾ ಜೋರಾಪುರ, ಡಾ, ಅಪ್ಪು ರಾಠೋಡ್ ಐಕ್ಯೂಎಸಿ ಸಂಯೋಜಕಾರದ ಡಾ ಎ ಯು ರಾಠೋಡ ಮಹಾವಿದ್ಯಾಲಯ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗಹಿಸಿದ್ದರು.

ಇದೇ ಸಂಧರ್ಭದಲ್ಲಿ ಪುಟ್ಟರಾಜ ಕವಿ ಗವಾಯಿಗಳು ವಿರಚಿತ ಗೀತೆಗಳನ್ನು ಹಾಡುವ ಮೂಲಕ ಸಂಗೀತ ವಿಭಾಗದ ಶೃತಿ ನಮನಗಳನ್ನು ಸಲ್ಲಿಸಲಾಯಿತು.

# ಹೋಳಿ ಶಾಂತಿ ಸಭೆ




**ಬಾಗಲಕೋಟೆ :** ಹೋಳಿ ಹಬ್ಬವನ್ನು ಶಾಂತಿ ಮತ್ತು ಸೌಹಾರ್ದತೆಯಿಂದಆಚರಿಸಿಎಂದುಡಿಎಸ್ಪಿಗಜಾನನ ಸುತಾರ ಮನವಿ ಮಾಡಿದರು. ನಗರದ ಶಹರ್ ಪೊಲೀಸ್ ಠಾಣೆಯಲ್ಲಿ ಹಮ್ಮಿಕೊಂಡಿದ್ದ ಹೋಳಿ ಶಾಂತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಾಂತಿ ಸುವ್ಯವಸ್ಥೆ ಕಾಪಾಡಲು ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ.

ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡಬೇಡಿ. ವಿದ್ಯಾರ್ಥಿಗಳ ಪರೀಕ್ಷೆ ಹಾಗೂ ರಂಜಾನ್ ಹಬ್ಬ ಒಂದೇ ಸಮಯದಲ್ಲಿ ಬಂದಿರುವುದರಿಂದ ಪರಸ್ಪರ ಕೋಮು ಸೌಹಾರ್ದತೆ ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಸಿಪಿಐ ಗುರುನಾಥ ಚವ್ಹಾಣ, ಪಿಎಸ್‌ಐ ಶರಣೇಶ ಜಾಲಿಹಾಳ ಉಪಸ್ಥಿತರಿದ್ದರು. ಹೋಳಿ ಆಚರಣೆ ಸಮಿತಿಯ ಅಧ್ಯಕ್ಷ ಕಳಕಪ್ಪ ಬಾದೂಡಗಿ, ಹಾಗೂ ಸಂಜುವಾಡಕರ, ಮೆಹಬೂಬ ರಬಕವಿ, ಬಸವರಾಜ ಹುನಗುಂದ, ಎ.ಎ. ದಂಡಿಯಾ, ವೈ.ಜೆ. ಪಠಾಣ, ಮಹಾಬಳೇಶ ಗುಡಗುಂಟಿ, ನಾರಾಯಣಸಾ ಪವಾರ, ಸಾಗರ ಬಂಡಿ, ಯಲ್ಲಪ್ಪ ಅಂಬಿಗೇರ, ಮನೋಹರ ಏಳೆಮ್ಮಿ, ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಖಾಸಗಿ ಶಾಲೆಗಳಿಗೂ ಬಿಸಿಯೂಟ, ಸಮವಸ್ತ್ರ ವಿಸ್ತರಣೆ ಅಗತ್ಯ: ಮುಕ್ಕಣ್ಣವರ




**ಬಾಗಲಕೋಟೆ :** ಸರ್ಕಾರಿ ಶಾಲೆಗಳಲ್ಲಿ ಸಿಗುವ ಬಿಸಿಯೂಟ ಮತ್ತು ಸಮವಸ್ತ್ರ ಸೌಲಭ್ಯಗಳನ್ನು ಖಾಸಗಿ ಶಾಲೆಗಳಿಗೂ ವಿಸ್ತರಿಸುವ ಅಗತ್ಯವಿದೆ ಎಂದು ಫಸ್ಟ್ ಕರ್ನಾಟಕಫೆಡರೇಶನ ರಾಜ್ಯಾಧ್ಯಕ್ಷ ಎನ್. ಎಚ್. ಮುಕ್ಕಣ್ಣವರ ಅಭಿಪ್ರಾಯಪಟ್ಟರು. ಜಿಲ್ಲೆಯ ಬೇವೂರು ಗ್ರಾಮದಲ್ಲಿರುವ ಪ್ರಗತಿ ನ್ಯಾಷನಲ್ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳವನ್ನು ಜ್ಯೋತಿ ಬೆಳಗಿಸಿ ಮಾತನಾಡಿದರು. ಸರ್ಕಾರಿ ಶಾಲೆಗಳಲ್ಲಿ ಸಿಗುವ ಸೌಲಭ್ಯಗಳಲ್ಲಿ ಅಲ್ಪವಾದರೂ ಖಾಸಗಿ ಶಾಲೆಗಳಿಗೆ ದೊರೆತರೆ ವಿದ್ಯಾರ್ಥಿಗಳಿಗೆ ಸಮಾನ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವಲ್ಲಿ ಸಹಾಯಕರಾಗುತ್ತದೆ ಎಂದರು. ಶಾಲೆಯ ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯದ ಹಾರೈಕೆ ಮಾಡಿ, ಪಾಲಕರಿಗೆ ಮಕ್ಕಳ ಶಿಕ್ಷಣದ ಮೇಲಿನ ಗಮನದ ಅಗತ್ಯತೆಯನ್ನು ಅವರು ಒತ್ತಿ ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಮಾಜಿ ಗ್ರಾ.ಪಂ. ಅಧ್ಯಕ್ಷ ಜಿ. ವಾಯ್. ಹೆರಕಲ್ಲ ಅವರು ಮಕ್ಕಳ ಶಿಕ್ಷಣದ ಜವಾಬ್ದಾರಿ ಕೇವಲ ಶಾಲೆಯಲ್ಲದೆ, ಪಾಲಕರ ಮೇಲೂ ಇದೆ ಎಂದು ಉಲ್ಲೇಖಿಸಿದರು. "ಮಕ್ಕಳನ್ನು ಒಳ್ಳೆಯ ಶಾಲೆಯಲ್ಲಿ ದಾಖಲಿಸುವುದರಿಂದ ಮಾತ್ರ ಸಾಲದು; ಅವರು ಹೇಗೆ ಕಲಿಯುತ್ತಿದ್ದಾರೆ ಎಂಬುದನ್ನು ಗಮನಿಸಬೇಕು" ಎಂದು ಸಲಹೆ ನೀಡಿದರು. ಇತ್ತೀಚಿನ ಸ್ಪರ್ಧಾತ್ಮಕ ಯುಗದಲ್ಲಿ ಶ್ರಮ, ನಿಷ್ಠೆ, ಪರಿಶ್ರಮದ ಮಹತ್ವವನ್ನು ಅವರು ಒತ್ತಿ ಹೇಳಿದರು. ಜೊತೆಗೆ, ಪ್ರಗತಿ ಇಂಟರ್ ನ್ಯಾಷನಲ್ ಶಾಲೆ ಮುಂದಿನ ದಿನಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಬೆಳೆಯಲಿ ಎಂಬ ಹಾರೈಕೆಯನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಪ.ಪೂ. ಗ್ಯಾನಪ್ಪಜ್ಜನವರ ದಿವ್ಯ ಸಾನಿಧ್ಯ ವಹಿಸಿದ್ದರು. ಪ್ರಗತಿ ನ್ಯಾಷನಲ್ ಶಾಲೆಯ ಅಧ್ಯಕ್ಷ ಬಿ. ವಾಯ್. ಅಮರಗೋಳ ಕಾರ್ಯಕ್ರಮ ಉದ್ಘಾಟಿಸಿದರು. ಶಾಲೆಯ ವಿದ್ಯಾರ್ಥಿಗಳ ಸಾಂಸ್ಕೃತಿಕ ಪ್ರದರ್ಶನ. ಮಕ್ಕಳ ನೃತ್ಯ, ಮುಂತಾದ ಕಾರ್ಯಕ್ರಮಗಳು ಅತಿಥಿಗಳು ಮತ್ತು ಪಾಲಕರ ಮನಸ್ಸುಗೆದ್ದವು. ಈಸಂದರ್ಭದಲ್ಲಿ ಖ್ಯಾತ ರಂಗಭೂಮಿ ಕಲಾವಿದ ಭರತ ತಾಳಿಕೋಟಿ, ಗದ್ದನಕೇರಿಯ ಹುಚ್ಚೇಶ್ವರ ವಿದ್ಯಾ ಸಂಸ್ಥೆಯ ಅಧ್ಯಕ್ಷ ಡಾ. ಟಿ. ಎಚ್. ಸನಗಿನ, ಬಾಗಲಕೋಟೆ ಲಿಟಲ್ ವಂಡರ್ ಶಾಲೆಯ ಸಮಸ್ಥಾಪಕ ಪ್ರಕಾಶಗೌಡ, ಶಿಕ್ಷಣ ಸಂಯೊಝುಕರಾದ ಎಸ್. ಎಸ್. ಬೆಣ್ಣೂರ, ಆರಕ್ಷಕ ಬಿ. ಡಿ. ಘಂಟಿ, ಪಾಲಕರು, ಸೇರಿದಂತೆ ಅನೇಕರು ಹಾಜರಿದ್ದರು.

# ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ "ಭಾರತೀಯ ಮಹಿಳೆ ಅಂದು-ಇಂದು-ಮುಂದು" ವಿಚಾರ ಸಂಕಿರಣ ಸಾಂಸ್ಕೃತಿಕ ಅಭಿಯಾನ-2025



**ಬೆಂಗಳೂರು :** ಸುರ್ವೆ ಕಲ್ಚರಲ್ ಅಕಾಡೆಮಿ ತನ್ನ 32ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ, 2025ರ ಮಾರ್ಚ್ 8ರ ಶನಿವಾರದಂದು, ಬೆಂಗಳೂರಿನ ನಯನ ರಂಗಮಂದಿರದಲ್ಲಿ, ಪೂರ್ಣ ದಿನ, 72ನೇ ರಾಷ್ಟ್ರೀಯ ಕಲಾ ಪ್ರತಿಭೋತ್ಸವ ಹಮ್ಮಿಕೊಂಡಿದೆ. 50ಕ್ಕೂ ಹೆಚ್ಚು ಮಹಿಳೆ ಮತ್ತು ಮಕ್ಕಳು ನೃತ್ಯ ರೂಪಕಗಳನ್ನು ಪ್ರಸ್ತುತ ಪಡಿಸಲಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಬೆಳಿಗ್ಗೆ 10ಕ್ಕೆ ಕರ್ನಾಟಕದ ಹೆಸರಾಂತ ನೃತ್ಯ ಶಾಲೆ ಸಾಯಿ ಆರ್ಟ್ ಇಂಟರ್‌ನ್ಯಾಷನಲ್ ಸಂಸ್ಥೆಯ ಅಧ್ಯಕ್ಷ ಶ್ರೀ ಸಾಯಿವೆಂಕಟೇಶ್ ಮತ್ತು ಡಾ. ಸುಪರ್ಣಾ ವೆಂಕಟೇಶ್‌ರವರು ಸಮಾರಂಭವನ್ನು ಉದ್ಘಾಟಿಸಲಿದ್ದು, ಸಾನಿಧ್ಯವನ್ನು ಬೆಳಗಾವಿ ಜಿಲ್ಲೆ ಚಿಪ್ಪಲಕಟ್ಟಿಯ ಹಿರೇಮಠದಡಾ.ಕಲ್ಮೇಶ್ವರಮಹಾಸ್ವಾಮಿಗಳು ವಹಿಸಲಿದ್ದಾರೆ. ಸಂಸ್ಥೆಯ ಗೌರವ ಅಧ್ಯಕ್ಷೆ ಡಾ. ಸುಮತಿಶ್ರೀ ನವಲಿ ಹಿರೇಮಠ ಮತ್ತು ಚಲನಚಿತ್ರ ಕಲಾವಿದೆ ಶ್ರೀಮತಿ ಮೀನಾ, ಧಾರವಾಡದ ಸಾಹಿತಿ ಡಾ. ಸರಸ್ವತಿ ಕಳಸದ, ಅಂತರಾಷ್ಟ್ರೀಯ ನೃತ್ಯ ಕಲಾವಿದೆ ಶ್ವೇತಾ ವೆಂಕಟೇಶ್ ಉಪಸ್ಥಿತರಿರುತ್ತಾರೆ.

ಬೆಳಿಗ್ಗೆ 10 ರಿಂದ ಪ್ರಾರಂಭವಾಗಿ 5 ಗಂಟೆಯವರೆಗೆ ಭರತನಾಟ್ಯ, ಜಾನಪದ ನೃತ್ಯ, ಚಲನಚಿತ್ರ ನೃತ್ಯ, ವೆಸ್ಟ್ರನ್ ನೃತ್ಯ ಮತ್ತು ಹಲವು ನೃತ್ಯರೂಪಕ ಮತ್ತು ಸಮೂಹ ನೃತ್ಯಗಳನ್ನು ಸಾಂಸ್ಕೃತಿಕ ಪ್ರತಿಭೋತ್ಸವದಲ್ಲಿ ಪ್ರದರ್ಶನ ನಡೆಯಲಿದೆ.

ಬೆಂಗಳೂರಿನ ಸಾಯಿ ಆರ್ಟ್ ಇಂಟರ್‌ನ್ಯಾಷರ್ ಸಂಸ್ಥೆಯಿಂದ ಶ್ವೇತಾ ವೆಂಕಟೇಶ್‌ರವರ ನೇತೃತ್ವದಲ್ಲಿ, 40ಕ್ಕೂ ಹೆಚ್ಚು ಮಕ್ಕಳು ನೃತ್ಯಸೌರಭ ಕಾರ್ಯಕ್ರಮ ನೀಡಲಿದ್ದಾರೆ.ಮಾಲೂರಿನ ಶ್ರೇಯಾಂಕ ಡ್ಯಾನ್ಸ್ ಅಕಾಡೆಮಿ ವ್ಯವಸ್ಥಾಪಕ ನಿರ್ದೇಶಕಿ ಶ್ರೀಮತಿ ಪ್ರಿಯಾಂಕ ವಿ.ಎಂ. ನೇತೃತ್ವದಲ್ಲಿ 15ಕ್ಕೂ ಹೆಚ್ಚು ಮಕ್ಕಳು ಭರತನಾಟ್ಯ ಸೇರಿದಂತೆ "ನೃತ್ಯಮಂಜರಿ" ವಿವಿಧ ನೃತ್ಯ ಪ್ರದರ್ಶನ ನಡೆಯಿಸಿಕೊಡಲಿದ್ದಾರೆ.

ರಾಮನಗರದ ತೃಷ್ಣ ವಿ ಕುಮಾರ್ ರವರು ನೃತ್ಯಾಂಜಲಿ ಕಾರ್ಯಕ್ರಮ ನೀಡಲಿದ್ದಾರೆ. ಜೊತೆಯಲ್ಲಿ ಶ್ರೀ ಭುವನೇಶ್ವರಿ ಮಹಿಳಾ ಜಾನಪದ ಕಲಾಸಂಘ ಮಂಡಲಗೇರಿ ಇವರಿಂದ ಮೂಲ ಜನಪದ ಗಾಐನ ಪ್ರಸ್ತುತ ಪಡಿಸಲಿದ್ದು, ಪೂರ್ಣ ದಿನ ಗಾಯಕಿ ಅರುಣಾ ಎಂ. ಮತ್ತು ತೀರ್ಥಹಳ್ಳಿ ನವ್ಯ ಕುರುವಳ್ಳಿ ಇವರಿಂದ ಕರೋಕೆ ಗಾಯನ ಹಾಗೂ ಬೆಂಗಳೂರಿನ ಗಾಯಕಿ ಡಾ. ರಾಧಿಕ ಆರ್. ಚಿಂಚೋಳಿಯವರಿಂದ ಹಿಂದುಸ್ಥಾನಿ ಗಾಯನ ಮತ್ತು ಶಿವಮೊಗ್ಗದ ಸ್ಟ್ಯಾಂಡಪ್ ಕಮೆಡಿಯನ್ ಕವಿತಾ ಸುಧೀಂದ್ರರವರಿಂದ ಹಾಸ್ಯ ಕಾರ್ಯಕ್ರಮ ನಡೆಯಲಿದೆ.

ವಿಚಾರ ಸಂಕಿರಣ : ಸಂಜೆ 5.30 ರಿಂದ "ಭಾರತೀಯ ಮಹಿಳೆ ಅಂದು-ಇಂದು-ಮುಂದು" ಕುರಿತು ವಿಚಾರ ಸಂಕಿರಣ ನಡೆಯಲಿದ್ದು, ಸಾಹಿತಿ ರಾಜೇಂದ್ರ ಎಸ್. ಗಡಾದ, ಗದಗ ಮತ್ತು ಶ್ರೀಮತಿ ಡಿ. ನಳಿನಿ ಚಿಕ್ಕಮಗಳೂರು ಇವರು ವಿಷಯ ಮಂಡಿಸಲಿದ್ದಾರೆ. ದಿವ್ಯಸಾನಿಧ್ಯವನ್ನು ಉಡುಪಿಯ ಶ್ರೀ ದುರ್ಗಾ ಆದಿಶಕ್ತಿ ಕ್ಷೇತ್ರದ ಧರ್ಮದರ್ಶಿಗಳಾದ ಶ್ರೀಶ್ರೀ ರಮಾನಂದ ಗುರೂಜಿ ವಹಿಸಲಿದ್ದು, ಸಮಾರಂಭವನ್ನು ಮಾಜಿ ರಾಜ್ಯ ಸಭಾ ಸದಸ್ಯ ಮತ್ತು ಹಿರಿಯ ಕವಿಗಳಾದ ಡಾ. ಎಲ್. ಹನುಮಂತಯ್ಯ ಉದ್ಘಾಟಿಸಲಿದ್ದಾರೆ. ಧಾರವಾಡದ ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷ ಶ್ರೀ ಸಂಗಮೇಶ ಬಬಲೇಶ್ವರ ನಾಲ್ಕು ಗ್ರಂಥಗಳನ್ನುಲೋಕಾರ್ಪಣೆಗೊಳಿಸಲಿದ್ದು, ಕಾರ್ಯಕ್ರಮದಲ್ಲಿ ಮಾಜಿ ಸಚಿವ ಶ್ರೀ ಪ್ರಮೋದ್ ಮಧ್ವರಾಜ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.ಚುಟುಕುಸಾಹಿತ್ಯಪರಿಷತ್‌ನ ರಾಜ್ಯಸಂಚಾಲಕ ಡಾ. ಎಂ.ಜಿ.ಆರ್. ಅರಸ್, ಚಲನಚಿತ್ರ ಕಲಾವಿದರಾದ ಶಂಕರಭಟ್ ಮತ್ತು ಶ್ರೀಮತಿ ಮೀನಾ ಈ ಸಂದರ್ಭದಲ್ಲಿ ಉಪಸ್ಥಿತರಿರುತ್ತಾರೆ. ಮಾಜಿ ಸಚಿವೆ ಡಾ. ಲೀಲಾದೇವಿ ಆರ್. ಪ್ರಸಾದ್‌ರವರ "ಕಾಡಿ ಬೇಡದ ಬುತ್ತಿ" ಮತ್ತು ಮಕ್ಕಳ ಸಾಹಿತಿ ಎಂದೆ ಹೆಸರಾಗಿರುವ ಗದಗ ಜಿಲ್ಲೆ ರಾಜೇಂದ್ರ ಎಸ್. ಗಡಾದರವರ "ವಿಲೋಕನ" "ಸಂತಮ್ಮಣ್ಣ ರೈಟ್ ಸಹೋದರರು" "ವಚನಾವರಣ" ಎಂಬ ನಾಲ್ಕು ಕೃತಿಗಳು ಲೋಕಾರ್ಪಣೆಗೊಳ್ಳಲಿವೆ.

ಈ ಸಂದರ್ಭದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಅವರ ಜೀವಮಾನ ಸಾಧನೆಗಾಗಿ 2024ರ ಸಾಲಿನ ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿಯನ್ನು, ಡಾ. ಲೀಲಾದೇವಿ ಆರ್. ಪ್ರಸಾದ್ (ಬೆಳಗಾವಿ ಜಿಲ್ಲೆ), ಶ್ರೀ ಸಿದ್ಧು ಯಾಪಲಪರವಿ (ರಾಯಚೂರು ಜಿಲ್ಲೆ), ಸಿ.ಕೆ. ಜೋರಾಪುರ (ಬೆಳಗಾವಿ), ಡಾ. ಅಮ್ಮಸಂದ್ರ ಸುರೇಶ (ಮೈಸೂರು ಜಿಲ್ಲೆ), ಡಾ. ಜಗನ್ನಾಥರಾವ್ ಬಹುಳೆ (ಬೆಂಗಳೂರು), ಶ್ರೀಮತಿ ಎನ್. ಕನ್ನಿಕಾಪರಮೇಶ್ವರಿ (ಕೋಲಾರ ಜಿಲ್ಲೆ), ಶ್ರೀ ವೀರಲೋಕ ಪ್ರಕಾಶನದ ಸಂಸ್ಥೆ ಪರವಾಗಿ ಶ್ರೀ ವೀರಕಪುತ್ರಶ್ರೀನಿವಾಸ (ಬೆಂಗಳೂರು), ವೈದ್ಯವಾರ್ತಾ ಪ್ರಕಾಶನ ಪರವಾಗಿ ಶ್ರೀಮತಿ ಅಂಬ ಎಂ.ಜಿ.ಆರ್. ಅರಸ್ (ಮೈಸೂರು ಜಿಲ್ಲೆ) ರವರು ಪ್ರಶಸ್ತಿ ಪಡೆಯಲಿದ್ದಾರೆ.

32ನೇ ವರ್ಷದ ಅಕಾಡೆಮಿ ಪ್ರಶಸ್ತಿಗಳ ಪ್ರದಾನ ನಡೆಯಲಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಡಾ. ಸರಸ್ವತಿ ಆರ್. ಕಳಸದ, ಧಾರವಾಡ ಮತ್ತು ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷ ಎನ್ನಾರ್ ಕೆ. ವಿಶ್ವನಾಥ್, ವಿಜಯ ಕರ್ನಾಟಕ ಪತ್ರಿಕೆ ಛಾಯಾಗ್ರಾಹಕರಾದ ಗಣೇಶ್ ಕೆ.ಎಸ್, ಸ್ಟ್ಯಾಂಡ್‌ಅಪ್ ಕಮಿಡಿಯನ್ ಕವಿತಾ ಸುಧೀಂದ್ರ ಶಿವಮೊಗ್ಗ ಸೇರಿದಂತೆ ರಾಜ್ಯದ ವಿವಿಧ ಕ್ಷೇತ್ರದ 25 ಗಣ್ಯರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಸ್ಥಾಪಕ ಅಧ್ಯಕ್ಷ ರಮೇಶ ಸುರ್ವೆ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಸಮಾಜ ಸೇವಕ, ಆರ್ ಟಿ ಒ ಸಂಘದ ರಾಜ್ಯಾದ್ಯಕ್ಷ ಮಲ್ಲಿಕಾರ್ಜುನ್, ವಾಂಟೆಡ್, ಕನ್ನಡ ಚಲನಚಿತ್ರಕ್ಕೆ ಕ್ಲಾಪ್ ಮಾಡುವುದರ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿ ಶುಭ ಕೋರಿದರು



**ಕೆಆರ್‌ಪೇಟೆ:** ಪಟ್ಟಣದನಾಗಮಂಗಲರಸ್ತೆಯಲ್ಲಿರುವ ಶ್ರೀ ಆಂಜನೇಯ ಸ್ವಾಮಿಯ ದೇವಾಲಯದಲ್ಲಿ ಮಹಿಳಾ ಪ್ರಧಾನ ಚಲನಚಿತ್ರ ಅದಕ್ಕೂ ಮುನ್ನ ವಾಂಟೆಡ್ ಚಲನಚಿತ್ರದ ನಿರ್ಮಾಪಕರು,ನಿರ್ದೇಶಕರು,ಕೋರಿಯಾಗ್ರಾಫರ್,ಮ್ಯೂಸಿಕ್ ಡೈರೆಕ್ಟರ್ ಹಾಗೂ ಚಿತ್ರತಂಡ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ದೇವರಲ್ಲಿ ಪ್ರಾರ್ಥಿಸಿದರು.

ವಾಂಟೆಡ್ ಚಲನಚಿತ್ರಕ್ಕೆ ಕ್ಲಾಪ್ ಮಾಡುವುದರ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿ ಮಾತನಾಡಿದ ಆರ್ ಟಿ ಒ ಮಲ್ಲಿಕಾರ್ಜುನವರು ಇತ್ತೀಚಿನ ದಿನಗಳಲ್ಲಿ ಸ್ಟಾರ್ ಗಳ ಚಲನಚಿತ್ರಗಳನ್ನು ಮಾತ್ರ ಅವರವರ ಅಭಿಮಾನಿಗಳು ವೀಕ್ಷಿಸುತ್ತಿರುವುದು ಬೇಸರದ ಸಂಗತಿಯಾಗಿದೆ. ಕನ್ನಡ ಪ್ರೇಕ್ಷಕರು ಅಭಿಮಾನಿಗಳು ಕನ್ನಡ ಚಲನಚಿತ್ರಗಳನ್ನು ಚಿತ್ರಮಂದಿರದಲ್ಲಿ ವೀಕ್ಷಿಸಿದಾಗ ಮಾತ್ರ ಕನ್ನಡ ಚಿತ್ರರಂಗ ಬೆಳೆಯಲು ಸಾಧ್ಯವಾಗುತ್ತದೆ.ಇಡೀ ಚಿತ್ರತಂಡ ಕಷ್ಟ ಪಟ್ಟು ಪುಟ್ಟ ಕಲಾವಿದರನ್ನು ಸಿನಿಮಾದಲ್ಲಿ ಹಾಕಿಕೊಂಡು ಕೋಟ್ಯಾಂತರ ರೂಪಾಯಿಗಳ ಬಜೆಟ್ ಅನ್ನು ನಿರ್ಮಾಪಕರು ಕಷ್ಟ ಪಟ್ಟು ಸಿನಿಮಾವನ್ನು ಮಾಡಿರುತ್ತಾರೆ.

ಅದನ್ನುತೆರೆಯಪರದೆಯಮೇಲೆವೀಕ್ಷಕರುಸಿನಿಮಾವನ್ನು ನೋಡದಿದ್ದರೆ ನಷ್ಟ ಅನುಭವಿಸಬೇಕಾಗುತ್ತದೆ. ಜೊತೆಗೆ ಇತ್ತೀಚಿನ ದಿನಗಳಲ್ಲಿ ಸಿನಿಮಾ ರಿಲೀಸ್ ಆದ ದಿನವೇ ಪೈರಸಿಗಳಗಿರುತ್ತಾವೇ ಇದರಿಂದ ಎಷ್ಟೋ ಕಲಾವಿದರಿಗೆ ನಿರ್ಮಾಪಕರಿಗೆ ಹಾಗು ಚಿತ್ರತಂಡದವರಿಗೆ ನಷ್ಟವಾಗುತ್ತದೆ,

ಜೊತೆಗೆ ಕಲಾವಿದರನ್ನು ಪ್ರೋತ್ಸಾಹಿಸಬೇಕು.ಸ್ಟಾರ್ ಸಿನಿಮಾಗಳಷ್ಟೆ ನೋಡುವುದಲ್ಲ ನೂತನ ಕಲಾವಿದರ ಸಿನಿಮಾಗಳನ್ನು ಕನ್ನಡ ಅಭಿಮಾನಿಗಳು ಪ್ರೋತ್ಸಾಹ ಮಾಡಿದಾಗ ಮಾತ್ರ ಕನ್ನಡ ಚಲನಚಿತ್ರಗಳಿಗೆ ಬೆಳೆಯಲು ಉಳಿಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಕುವೆಂಪು ಕನ್ನಡ ಗೆಳೆಯರ ಸೇವಾ ಟ್ರಸ್ಟ್ ಅಧ್ಯಕ್ಷರು ಹಾಗೂ ಸಮಾಜ ಸೇವಕರಾದಂತಹ ಕೆ ಬಿ ಸಿ ಮಂಜುನಾಥ್ ನವರು, ಮಾತನಾಡಿ ಪರಭಾಷೆಯ ಚಲನಚಿತ್ರಗಳ ಪ್ರಭಾವದಿಂದ ಕನ್ನಡ ಚಲನಚಿತ್ರಗಳನ್ನು ನೋಡುವವರ ಸಂಖ್ಯೆ ಇಳಿಮುಖವಾಗುತ್ತಿದೆ. ಇದು ಕನ್ನಡ ಚಲನಚಿತ್ರಗಳ ಮೇಲೆ ಪರಿಣಾಮ ಬೀರುತ್ತದೆ. ಕನ್ನಡ ಅಭಿಮಾನಿಗಳು ಮೊದಲಿಗೆ ಕನ್ನಡ ಚಲನಚಿತ್ರಗಳನ್ನು ಗೌರವಿಸಬೇಕು ಪ್ರೀತಿಸಬೇಕು. ಸಿನಿಮಾಮಂದಿರದಲ್ಲಿಬಂದುಸಿನಿಮಾನೋಡಬೇಕು. ಜೊತೆಗೆ ಮೊದಲು ಕನ್ನಡ ಸಿನಿಮಾ ನೋಡಲು ನಮ್ಮ ಕನ್ನಡ ಅಭಿಮಾನಿಗಳು ಆದ್ಯತೆ ನೀಡಬೇಕು, ಮತ್ತೆ ನೂತನ ಕಲಾವಿದರಿಗೆ ಪ್ರೋತ್ಸಾಹ ನೀಡಬೇಕು. ವಾಂಟೆಡ್ ಸಿನಿಮಾ ಉತ್ತಮವಾಗಿ ಮೂಡಿಬಂದು ಆದಷ್ಟು ಬೇಗ ಬೆಳ್ಳಿ ಪರದೆಯ ಮೇಲೆ ,ವಾಂಟೆಡ್ ಸಿನಿಮಾದಲ್ಲಿ ಅಭಿನಯಿಸಿದ ಎಲ್ಲಾ ಕಲಾವಿದರಿಗೆ ಶುಭ ವಾಗಲಿ ಅವರಿಗೆಲ್ಲ ಮುಂದೆ ಸಿನಿಮಾಗಳಲ್ಲಿ ಉತ್ತಮ ಅವಕಾಶಗಳು ದೊರೆಯಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ವಾಂಟೆಡ್ ಸಿನಿಮಾ ನಿರ್ಮಾಪಕಿ ಲಕ್ಷ್ಮೀ ಜಯಣ್ಣ,ಡೈರೆಕ್ಟರ್ ವಿನೋದ್ ಕುಮಾರ್, ವಿದ್ಯಾಶ್ರೀ,ನಾಗೇಶ್,ಕ್ಯಾಮರಾ ಜೀವನ್ ಗೌಡ,ಮ್ಯೂಜಿಕ್, ಧ್ರುವ,ಕೋರಿಯಾಗ್ರಾಫರ್ ಶಶಿ, ತಾರಾಗಣದಲ್ಲಿರುವ ಅನೇಕ ಕಲಾವಿದರು ಉಪಸ್ಥಿತರಿದ್ದರು.

**ವರದಿ:ಎಸ್ ರವಿ ಹೊನ್ನೇನಹಳ್ಳಿ**

# ಹೇಮಗಿರಿ ಬಿಜಿಎಸ್ ಶಾಲಾ ಮಕ್ಕಳಿಂದ ವಿಜ್ಞಾನ ವಸ್ತು ಪ್ರದರ್ಶನ



**ಕೆ.ಆರ್.ಪೇಟೆ :** ವಿಜ್ಞಾನದ ವಿಷಯವಾಗಿ ವಿದ್ಯಾರ್ಥಿಗಳಲ್ಲಿ ಸೂಕ್ತವಾಗಿರುವ ಜ್ಞಾನ ಪ್ರತಿಭೆಯನ್ನು ಹೊರಹೊಮ್ಮಿಸಲು ವಿಜ್ಞಾನ ವಸ್ತು ಪ್ರದರ್ಶನ ಉತ್ತಮ ವೇದಿಕೆಯಾಗಿದೆ ಎಂದು ಸಮಾಜ ಸೇವಕರಾದ ಆರ್.ಟಿ.ಓ ಮಲ್ಲಿಕಾರ್ಜುನ್ ಹೇಳಿದರು.

ತಾಲ್ಲೂಕಿನ ಕಸಬಾ ಹೋಬಳಿಯ ಹೇಮಗಿರಿಯ ಬಿಜಿಎಸ್ ಶಾಖಾಮಠದ ಪ್ರಧಾನಕಾರ್ಯದರ್ಶಿಗಳಾದ ಡಾ:ಜೆ.ಎನ್ ರಾಮಕೃಷ್ಣೇಗೌಡರ ಮಾರ್ಗದರ್ಶನದಲ್ಲಿ ಹೇಮಗಿರಿ ಬಿಜಿಎಸ್ ಎಜುಕೇಶನ್ ಸೆಂಟರ್ ಶಾಲಾ ಆವರಣದಲ್ಲಿ ಮಕ್ಕಳಿಂದ ನಡೆದ ವಿಜ್ಞಾನವಸ್ತುಪ್ರದರ್ಶನಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮಕ್ಕಳ ಜ್ಞಾನ ವೃದ್ಧಿಗೆ ಪ್ರದರ್ಶನಗಳು ಪೂರಕವಾಗಿವೆ. ಅವರಲ್ಲಿ ತಂತ್ರಜ್ಞಾನ, ಪರಿಸರ ಕಾಳಜಿ ಹಾಗೂ ಚರಿತ್ರೆಯ ಬಗ್ಗೆ ಆಸಕ್ತಿ ಬೆಳೆಯುತ್ತದೆ. ಅವರಲ್ಲಿರುವ ಸೃಜನಶೀಲತೆಗೆ ಉತ್ತೇಜನ ಸಿಗುತ್ತದೆ.

ವಿಜ್ಞಾನ ಎಂದರೆ ಒಂದು ಸಂಜೀವಿನಿಯಂತೆ ಬದುಕಿನಲ್ಲಿ ನಮಗೆ ಜ್ಞಾನ ಹಾಗೂ ಸರಿಯಾದ ಪ್ರಜ್ಞೆ ಬರಬೇಕೆಂದರೆ ವಿಜ್ಞಾನದ ಅವಶ್ಯಕತೆ ಇದೆ.

ವಿಜ್ಞಾನವು ಜ್ಞಾನದ ವಿಸ್ತಾರವನ್ನು ಹೆಚ್ಚಿಸುತ್ತದೆ. ನಮ್ಮಲ್ಲಿರುವ ಅಂಧಕಾರವನ್ನು ತೊಲಗಿಸುತ್ತದೆ. ಸಮಾಜವನ್ನು ಉತ್ತಮ ರೀತಿಯಲ್ಲಿ ನಡೆಸಲು ಅವಕಾಶ ಮಾಡಿಕೊಡುತ್ತದೆ.ಮಕ್ಕಳಲ್ಲಿಮೂಢನಂಬಿಕೆ ತೊಲಗಿಸಿ ವೈಜ್ಞಾನಿಕ ಮನೋಭಾವ ಬೆಳೆಸಲು ಹಾಗೂ ವಿಜ್ಞಾನದಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಲು ವಿಜ್ಞಾನ ವಸ್ತು ಪ್ರದರ್ಶನ ಸಹಕಾರಿಯಾಗುತ್ತದೆ ಎಂದು ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ತಿಳಿಸಿದರು.

ಈ ಸಂದರ್ಭದಲ್ಲಿ ಹೇಮಗಿರಿ ಬಿಜಿಎಸ್ ಶಾಲಾ ಪ್ರಾಂಶುಪಾಲ ಆನಂದ್, ಪುನೀತ್, ಮುಖ್ಯ ಶಿಕ್ಷಕ ಜಯಶೀಲ,ಪತ್ರಕರ್ತ ಮಹೇಶ್ ಗಂಜಿಗೆರೆ, ಸಯ್ಯದ್ ಕಲಿಲ್,ರಾಜು,ಶಾಲಾ ಶಿಕ್ಷಕ ವೃಂದ ಮಕ್ಕಳ ಪೋಷಕರು ವಿದ್ಯಾರ್ಥಿಗಳು ಸೇರಿದಂತೆ ಉಪಸ್ಥಿತರಿದ್ದರು.

**ವರದಿ :ಎಸ್ ರವಿ ಹೊನ್ನೇನಹಳ್ಳಿ**

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State

Designed by MKG-9535762618